# ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

'MUNJAVU' Kannada Weekly, KOPPA-CHM. ಫೋನ್ : 114

1ನೇ ವರ್ಷ 17ನೇ ಸಂಚಿಕೆ ಕೊಪ್ಪ 23-12-1990 ಭಾನುವಾರ ಬೆಲೆ 60 ಪೈಸೆ


## ಪತ್ನಿಯ ಶೀಲ ಶಂಕಿಸಿ ಕೊಲೆಗೈದಿದ್ದ ಆರೋಪಿಗೆ 7 ವರ್ಷ ಕಠಿಣ ಸಜೆ

ಕೊಪ್ಪ : ಇಲ್ಲಿಗೆ ಸಮೀಪದ ಕೊಡಿಗೆ ಬಿಕ್ಲು ಕೋಟೆವಳ್ಳಿ ಲಕ್ಷ್ಮಣ ಗೌಡನ ಮಗ ಗಣಪ್ಪ ಬಸಪ್ಪ ತಂದಾಳ್ ಎಂಬಾತ ತನ್ನ ಪತ್ನಿ ಗೌರಮ್ಮನ ಶೀಲ ಶಂಕಿಸಿ 1-2-89 ರ ರಾತ್ರಿ ಆಕೆಗೆ ಥಳಿಸಿ, ಸೀಮೆಎಣ್ಣೆ ಸುರಿದು ಬೆಂಕಿ ಹಚ್ಚಿ ಕೊಲೆಗೈದಿದ್ದನೆಂಬ ಆರೋಪದಲ್ಲಿ 7 ವರ್ಷದ ಕಠಿಣ ಶಿಕ್ಷೆಗೆ ಗುರಿಯಾಗಿದ್ದಾನೆ.

ದುರ್ದೈವಿ ಗೌರಮ್ಮ ಕೊಪ್ಪ ಆಸ್ಪತ್ರೆಯಲ್ಲಿ 8-3-89 ರಂದು ಮೃತಪಟ್ಟಿದ್ದಳು. ಕೊಪ್ಪ ಪೊಲೀಸರು ಲಕ್ಷ್ಮಣನ ಮೇಲೆ ಮೊಕದ್ದಮೆ ಹೂಡಿದ್ದರು.

ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಬಿ. ಕೆ. ಸುಂದರ ಈ ಪ್ರಕರಣದ ವಿಚಾರಣೆ ನಡೆಸಿ ತೀರ್ಪು ನೀಡಿದ್ದಾರೆ.

## ಮತದಾರರ ಪಟ್ಟಿಗೆ ಹಕ್ಕು/ಆಕ್ಷೇಪ ಸಲ್ಲಿಕೆಗೆ ಜ. 16 ಕಡೇ ದಿನ

ಕೊಪ್ಪ : ಶೃಂಗೇರಿ ಕ್ಷೇತ್ರದ ಮತದಾರರ ಪಟ್ಟಿ ಪರಿಷ್ಕರಣೆ ನಡೆದಿದ್ದು, 1-1-1991ಕ್ಕೆ 18 ವರ್ಷ ಆಗಿರುವವರ ಹೆಸರುಗಳು ಆಯಾ ಮಂಡಲ ಪಂಚಾಯ್ತಿಯಲ್ಲಿ ಪ್ರಕಟಿಸಲಾಗಿರುವ ಕರಡು ಪ್ರತಿಯಲ್ಲಿ ಬಿಟ್ಟು ಹೋಗಿದ್ದಲ್ಲಿ, ತಾ|| 16-1-90 ರೊಳಗಾಗಿ ನಿಗದಿತ ನಮೂನೆಯಲ್ಲಿ ನಿಗದಿತ ಶುಲ್ಕ ಪಾವತಿಸಿ ತಮ್ಮ ಹಕ್ಕು ಮತ್ತು ಆಕ್ಷೇಪಣೆಗಳನ್ನು ದಾಖಲಿಸಲು ತಿಳಿಸಲಾಗಿದೆ

## ಆಟೋ ರಿಕ್ಷಾ ಮೀಟರ್ ಡಿ.31ರೊಳಗೆಜೋಡಿಸಬೇಕು

ಚಿಕ್ಕಮಗಳೂರು : ನ 27 ರಿಂದ ಜಾರಿಗೆ ಬಂದಿರುವಂತೆ ರೂ 3-20 ಕನಿಷ್ಠ ದರ ಹಾಗೂ ಪ್ರತಿ ಕಿ ಮೀ. ಗೆ ರೂ. 1-70 ದರ ಹೊಂದಿಸಿದ ಮೀಟರ್ ಗಳನ್ನು ಡಿ 31 ರೊಳಗೆ ಎಲ್ಲಾ ಆಟೋ ರಿಕ್ಷಾಗಳವರೂ ಕಡ್ಡಾಯವಾಗಿ ಅಳವಡಿಸಬೇಕೆಂದು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಸೂಚಿಸಿದ್ದಾರೆ. ಘಟ್ಟ ಪ್ರದೇಶಗಳಲ್ಲಿ ಪ್ರತಿ ಕಿ. ಮೀ.ಗೆ ಇದಕ್ಕಿಂತ 10 ಪೈಸೆ ಹೆಚ್ಚಿಗೆ ಪಡೆಯಬಹುದಾಗಿದೆ ರಾತ್ರಿ 10 ರಿಂದ ಬೆಳಗ್ಗೆ 5 ಗಂಟೆವರೆಗೆ ನಿಗದಿತ ದರದ ಒಂದೂವರೆ ಪಟ್ಟು ಪಡೆಯಬಹುದು.

### ಕೊಪ್ಪದ ಸರ್ಕಾರಿ ಪ್ರೌಢಶಾಲೆ ಮತ್ತು ಕಿ ಕಾಲೇಜಿನ

## ವಿದ್ಯಾರ್ಥಿಗಳ ಪ್ರತಿಭಟನೆ

**ಕೊಪ್ಪ : ಪತ್ರಿಕೆಯೊಂದರ ಸಂಪಾದಕರ ವಿರುದ್ಧ ಶಾಲೆ-ಕಾಲೇಜು ವಿದ್ಯಾರ್ಥಿಗಳು ಪ್ರತಿಭಟಿಸಿ ಮೆರವಣಿಗೆ ನಡೆಸಿದ ಅಪರೂಪದ ಪ್ರಕರಣವೊಂದು ಇಲ್ಲಿ ಡಿ. 22 ರಂದು ನಡೆಯಿತು.**

'ತುಂಗಾ ವಾರ್ತೆ'ಯ ಡಿ. 20ರ ಸಂಚಿಕೆಯಲ್ಲಿ ಇಲ್ಲಿನ ಕಿರಿಯ ಕಾಲೇಜು ಪ್ರಿನ್ಸಿಪಾಲ್ ರಾಮಕೃಷ್ಣಯ್ಯ ಅವರು ಹಣಕಾಸಿನ ಹಲವು ಅವ್ಯವಹಾರಗಳನ್ನು ಎಸಗಿರುವುದಾಗಿ ಪ್ರಕಟವಾಗಿರುವ ವರದಿಯ ವಿರುದ್ಧ ಈ ಪ್ರತಿಭಟನೆ ನಡೆಯಿತು.

ಬೆಳಗ್ಗೆ ಸುಮಾರು 150 ಮಂದಿ ಕಿರಿಯ ಕಾಲೇಜು ವಿದ್ಯಾರ್ಥಿಗಳೂ ಮಧ್ಯಾಹ್ನ ಪ್ರೌಢ ಶಾಲೆಯ 300-350 ವಿದ್ಯಾರ್ಥಿಗಳೂ ಘೋಷಣೆ ಕೂಗುತ್ತ ಮೆರವಣಿಗೆ ನಡೆಸಿ ತಹಸೀಲ್ದಾರರಿಗೆ (ಅವರ ಗೈರು ಹಾಜರಿಯಲ್ಲಿ ಶಿರಸ್ತೇದಾರರ ಹಸ್ತ) ಮನವಿಯೊಂದನ್ನು ಸಲ್ಲಿಸಿದರು. ವಿದ್ಯಾರ್ಥಿನಿಯರೂ ಸಮ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಪತ್ರಿಕೆಯಲ್ಲಿ ಪ್ರಕಟವಾಗಿರುವ ಆಪಾದನೆಗಳ ಬಗ್ಗೆ ಕೂಡಲೇ ಕಾಲೇಜು ಆವರಣದಲ್ಲೇ ತನಿಖೆಯಾಗಬೇಕು; ತನಿಖೆಯ ವೇಳೆಗೆ ದೂರುದಾರರು ಆಪಾದನೆಗಳನ್ನು ಸಮರ್ಥಿಸಿ ಸಾಬೀತುಪಡಿಸಬೇಕು ; ತಪ್ಪಿದಲ್ಲಿ ಬಹಿರಂಗ ಕ್ಷಮಾಪಣೆ ಕೇಳಬೇಕು ಎಂದು ಮನವಿಯಲ್ಲಿ ಒತ್ತಾಯಿಸಿರುವ ವಿದ್ಯಾರ್ಥಿ ವೃಂದ, ಯಾರೇ ತಪ್ಪಿತಸ್ಥರಾಗಿದ್ದರೂ ಚಿಂತೆಯಿಲ್ಲ; ಆದರೆ ಸತ್ಯ ಸಂಗತಿ ಬೆಳಕಿಗೆ ಬರಬೇಕು, ನಮಗೆ ನ್ಯಾಯ ಸಿಗಬೇಕು ಎಂದು ಕೇಳಿದ್ದಾರೆ.

ಬುಧವಾರದೊಳಗೆ ತನಿಖೆ ನಡೆಸದಿದ್ದಲ್ಲಿ ಚಳುವಳಿ ಉಗ್ರಗೊಳಿಸುವುದಾಗಿ ವಿದ್ಯಾರ್ಥಿಗಳು ಸ್ಪಷ್ಟಪಡಿಸಿದ್ದಾರೆ.

## ರೋಟರ್ಯಾಕ್ಟ್ ವತಿಯಿಂದ ಮಕ್ಕಳಿಗೆ ಸ್ಪರ್ಧೆಗಳು

ಕೊಪ್ಪ : ಇಲ್ಲಿನ ರೋಟರ್ಯಾಕ್ಟ್ ವತಿಯಿಂದ ಡಿ. 25ರ ಮಂಗಳವಾರ ಬೆಳಗ್ಗೆ 9 ಗಂಟೆಯಿಂದ ಪುರಭವನ ಕ್ರೀಡಾಂಗಣದಲ್ಲಿ 18 ವರ್ಷದೊಳಗಿನ ಬಾಲಕ-ಬಾಲಕಿಯರಿಗಾಗಿ ವಿವಿಧ ವಯೋ ಗುಂಪುಗಳಲ್ಲಿ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. 4 ವರ್ಷದೊಳಗಿನ ಮಕ್ಕಳಿಗೆ 3 ಚಕ್ರದ ಸೈಕಲ್ ಸ್ಪರ್ಧೆ ಕೂಡ ಇದೆ ಅನಂತರ ಸಾಂಸ್ಕೃತಿಕ ಕಾರ್ಯಕ್ರಮಗಳಿವೆ. ಆಸಕ್ತರು ಅಂದು ಬೆಳಗ್ಗೆ 9 ಗಂಟೆಯೊಳಗಾಗಿ ಸ್ಥಳದಲ್ಲೇ ಹೆಸರು ನೋಂದಾಯಿಸಬಹುದು.

## ಶೃಂಗೇರಿ ಜೇಸಿ ಸಪ್ತಾಹ ಮುಕ್ತಾಯ : ಗಣ್ಯರಿಗೆ ಸನ್ಮಾನ

ಶೃಂಗೇರಿ : ಒಂದು ವಾರ ವಿವಿಧ ಕಾರ್ಯಕ್ರಮಗಳನ್ನು ನಡೆಸುವ ಮೂಲಕ ಆಚರಿಸಿದ ಇಲ್ಲಿನ ಜೇಸಿ ಸಪ್ತಾಹದ ಮುಕ್ತಾಯ ಸಮಾರಂಭ ಡಿ. 15ರ ಸಂಜೆ ನಡೆಯಿತು

ಈ ಸಮಾರಂಭದಲ್ಲಿ ಸ್ಥಳೀಯ ಕಾಲೇಜು ಪ್ರಿನ್ಸಿಪಾಲ್ ಪ್ರೊ|| ಎಂ. ಕೃಷ್ಣಪ್ಪಯ್ಯನವರ ಸಾರ್ಥಕ ಸೇವೆಗಾಗಿ 'ಸೇವಾ ಪುರಸ್ಕಾರ' ಮತ್ತು ಮೈಸೂರು ವಿ. ವಿ. ಯ 89-90ನೇ ಸಾಲಿನ ಬಿ.ಎಸ್‌ಸಿ. ಪರೀಕ್ಷೆಯಲ್ಲಿ 10ನೇ ರ್‍ಯಾಂಕ್ ಪಡೆದ ಸ್ಥಳೀಯ ಕಾಲೇಜು ವಿದ್ಯಾರ್ಥಿ ಎಚ್. ಎಂ. ನಾಗರಾಜರಾವ್ ರವರಿಗೆ 'ಪ್ರತಿಭಾ ಪುರಸ್ಕಾರ' ನೀಡಿ ಸನ್ಮಾನಿಸಲಾಯಿತು ಇನ್ಸ್‌ಪೆಕ್ಟರು ಸನ್ಮಾನಿತ ಅತಿಥಿ ಗೌರಿ ಶಂಕರ್ ಗೈರುಹಾಜರಾಗಿದ್ದರು

ಒಂದು ವಾರದ ವಿವಿಧ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ನೀಡಲಾಯಿತು. ಇನ್ನರ್‌ವೀಲ್ ಕ್ಲಬ್ಬ ಜೇಸಿ ಉಪಾಧ್ಯಕ್ಷರಾದ ಸ್ಥಳೀಯ ಕಾಲೇಜು ಉಪನ್ಯಾಸಕ ಜೆ.ಎಂ ಭಟ್ ಉಪಸ್ಥಿತರಿದ್ದರು, ಜೇಸಿ ಅಧ್ಯಕ್ಷ ಕುಮಾರ ಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. (ವರದಿ : 'ಶೃಂಗ' ಶೃಂಗೇರಿ.)

## ಬಸ್‌ಗಳ 'ಸರೆಂಡರ್' : ಲೋಕಾಯುಕ್ತಕ್ಕೆ ದೂರು

ಬಾಳೆಹೊನ್ನೂರು : ಕೊಪ್ಪದ ಶಂಕರ್ ಸಾರಿಗೆ ಸಂಸ್ಥೆಯವರು 16 ಬಸ್‌ಗಳನ್ನು 'ಸರೆಂಡರ್' ಮಾಡಿರುವುದರಿಂದ ಸರ್ಕಾರಕ್ಕೆ 3 ತಿಂಗಳಿಗೆ 1,60 ಲಕ್ಷ ರೂ. ನಷ್ಟವಾಗುತ್ತಿದ್ದು, ಇದನ್ನು ತಡೆಗಟ್ಟಲು ಕ್ರಮ ಕೈಗೊಳ್ಳುವಂತೆ ಇಲ್ಲಿನ ರಸ್ತೆ ಬಳಕೆದಾರರ ವೇದಿಕೆಯು ಲೋಕಾಯುಕ್ತರ ಬಿ. ಜಿ. ಕುಮಾರಿಂದ ಎ. ಜೆ. ಆನಂದನ್ ಹಾಗೂ ಸಾರಿಗೆ ಕಮಿಷನರ್ ಜಯರಾಜ್ ಅವರುಗಳಿಗೆ ದೂರು ನೀಡಿದೆ.

ಈ ಸಂಸ್ಥೆಯಲ್ಲಿ ಕಾನೂನು ರೀತ್ಯಾ ಪ್ರತಿ 10 ಬಸ್ಸಿಗೆ ಒಂದರಂತೆ ಬದಲಿ ಬಸ್ ಇಲ್ಲದೆ ಹಳ್ಳಿಗಾಡಿನ ಮಾರ್ಗಗಳು ಬಂದ್ ಆಗಿರುವುದಾಗಿಯೂ ದೂರಿನಲ್ಲಿ ತಿಳಿಸಲಾಗಿದೆ

## ಕೊಪ್ಪದಲ್ಲಿ ಆಕರ್ಷಕ ಜೇಸಿ ಸಪ್ತಾಹ

ಕೊಪ್ಪ : ಇಲ್ಲಿ ಡಿ. 9 ರಿಂದ 15ರ ವರೆಗೆ ಜೇಸಿ ಸಪ್ತಾಹ ಆಕರ್ಷಕ ರೀತಿಯಲ್ಲಿ ನಡೆಯಿತು ಇಡೀ ವಾರ ಮಕ್ಕಳಿಗೆ, ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ, ಯುವಜನರಿಗೆ ಹಾಗೂ ಮಹಿಳೆಯರು ಮತ್ತು ಸಾರ್ವಜನಿಕರಿಗೆ ವಿವಿಧ ಸ್ಪರ್ಧೆಗಳು ನಡೆದವು.

ಮಕ್ಕಳ ಛದ್ಮವೇಷ ಸ್ಪರ್ಧೆ, ಕ್ವಿಜ್, ಆಶುನಟನೆ, ಮುಂತಾದ ಸ್ಪರ್ಧೆಗಳಲ್ಲದೆ, ಭಾವಗೀತೆಯೊಂದಕ್ಕೆ ರಾಗ ಸಂಯೋಜನೆ ಸ್ಪರ್ಧೆ ಹೆಚ್ಚಿನ ಸಂಖ್ಯೆಯಲ್ಲಿ ಸ್ಪರ್ಧಿಗಳನ್ನು ಆಕರ್ಷಿಸಿತು. ವಿವಿಧ ಇಲಾಖೆಗಳ ಅಧಿಕಾರಿಗಳು-ನಾಗರಿಕರ ಮುಖಾಮುಖಿ ಜನವಾಣಿ ಕಾರ್ಯಕ್ರಮವೂ ಇತ್ತು. ಸಾಂಸ್ಕೃತಿಕ ಕಾರ್ಯಕ್ರಮಗಳು ಉತ್ತಮ ಮನರಂಜನೆ ನೀಡಿದವು.

ಬೇರುಕೊಡಿಗೆ ವೆಂಕಟೇಶ ಭಟ್ ಕಾರ್ಯಕ್ರಮ ಉದ್ಘಾಟಿಸಿದರು. ಮುಕ್ತಾಯ ಸಮಾರಂಭದ ಮುಖ್ಯ ಅತಿಥಿ ಎಂ. ಡಿ ಬಾಲಕೃಷ್ಣ ಅವರಿಂದ ನೇತ್ರದಾನ ಪ್ರಚಾರದ ಮತ್ತು ಹವ್ಯಾಸಿ ಪತ್ರಕರ್ತ ವಸಂತ ಕುಮಾರ್ ಹರ್ಡೀಕರ್ ಅವರಿಗೆ ಸನ್ಮಾನ ಹಾಗೂ ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಣೆ ನಡೆಯಿತು.

ಪರಿಸರ ಮತ್ತು ನೈಸರ್ಗಿಕ ಕೃಷಿ ಕುರಿತ ಭಿತ್ತಿ ಚಿತ್ರಗಳ ಪ್ರದರ್ಶನ ಪ್ರತಿದಿನ ವ್ಯವಸ್ಥೆಯಾಗಿತ್ತು.

(ವರದಿ : ಜೆ. ಎಸ್ ಶ್ರೀನಿಧಿ)

## ಶಂಕರ್ ಸಾರಿಗೆ ಕಾರ್ಮಿಕರ ಮುಷ್ಕರ ಮುಂದುವರಿಕೆ

ಕೊಪ್ಪ: ಇಲ್ಲಿನ ಶಂಕರ್ ಸಾರಿಗೆ ನೌಕರರ ಮುಷ್ಕರ ಶಾಂತವಾಗಿ ಮುಂದುವರಿದಿದೆ ಯಾವುದೇ ಇತ್ಯರ್ಥವಾಗುವ ಲಕ್ಷಣ ಇನ್ನೂ ಕಂಡು ಬಂದಿಲ್ಲ

ಡಿ 16ರಂದು ಕೊಪ್ಪದ ಯುವಜನ ಮೇಳದಲ್ಲಿ ಭಾಗವಹಿಸಿದ್ದ ಜಿಲ್ಲಾ ಮಂತ್ರಿ ಮಲ್ಲಿಕಾರ್ಜುನ ಪ್ರಸನ್ನ ಅವರ ಕರೆಯಂತೆ ಕಾರ್ಮಿಕ ನಾಯಕರು ಲೇಬರ್ ಕಮಿಷನರ್ ಮತ್ತು ಕಾರ್ಮಿಕ ಮಂತ್ರಿಗಳ ಸಮ್ಮುಖ ಮಾತುಕತೆಗಾಗಿ ಬೆಂಗಳೂರಿಗೆ ತೆರಳಿದ್ದಾರೆ.

ಸಂಸ್ಥೆಗೆ ಬೀಗಮುದ್ರೆ ಘೋಷಿಸುವ ಇಂಗಿತ ವ್ಯಕ್ತಪಡಿಸಿದ್ದ ಸಂಸ್ಥೆಯ ಆಡಳಿತ ವರ್ಗ, ಕಾರ್ಮಿಕರ ಮುಷ್ಕರ ಶಾಂತಿಯುತವಾಗಿದ್ದು, ಎಲ್ಲಾ ಬಸ್ಸುಗಳನ್ನೂ ಅವುಗಳ ಗ್ಯಾರೇಜುಗಳಿಗೆ ಕಾರ್ಮಿಕರು ಸುರಕ್ಷಿತವಾಗಿ ಹಿಂತಿರುಗಿಸಿರುವುದರಿಂದ ಬೀಗ ಮುದ್ರೆ ಘೋಷಿಸುವ ನಿರ್ಧಾರ ಕೈಬಿಟ್ಟಿರುವುದಾಗಿ ಡಿ 17ರಂದು ಕಾರ್ಮಿಕರಿಗೆ ಬರೆದ ಪತ್ರದಲ್ಲಿ ತಿಳಿಸಿದೆ

ಚಿಕ್ಕಮಗಳೂರು ಜಿಲ್ಲೆಯ ಪ್ರಮುಖ ಖಾಸಗಿ ಸಾರಿಗೆಯ ಬಸ್ [illegible] ಹೊಂದಿದಂತಿದ್ದ ಶಂಕರ್ ಬಸ್‌ಗಳ ಸಂಚಾರ ಸ್ಥಗಿತಗೊಂಡಿದ್ದರಿಂದ ಇಡೀ ಜಿಲ್ಲೆಯಲ್ಲಿ ಅದರಲ್ಲೂ ಮುಖ್ಯವಾಗಿ ಹಳ್ಳಿಗಾಡಿನಲ್ಲಿ ಪ್ರಯಾಣಿಕರ ಸ್ಥಿತಿ ಚಿಂತಾಜನಕವಾಗಿದೆ. ಸರ್ಕಾರಿ ಬಸ್ಸು ಸಾರಿಗೆಯ ಸುಮಾರು 40 ಬಸ್‌ಗಳು [illegible] ಓಡುತ್ತಿದ್ದರೂ ಇದು ಸಾಲುವುದಿಲ್ಲ.

ಇದೇ ವೇಳೆ ಸಾರಿಗೆ ಕಾರ್ಮಿಕರ [illegible] [illegible] ಚಳುವಳಿಯನ್ನು [illegible] ಸಂಖ್ಯೆಯ [illegible] (33 [illegible]) [illegible] ಬೆಂಬಲ ಇದೆ.

### ಎಸ್. ವಿ. ರಮೇಶ್‌ರ ಸಮರ್ಥ ನಿರ್ದೇಶನದ

## 'ಸಿಡಿದವಳು'—ಒಂದು ಯಶಸ್ವಿ ರಂಗ ಪ್ರಯೋಗ

ನಾಟಕವೊಂದು ಪ್ರದರ್ಶನ ಕಲೆ. ಆದರ ಒಂದೊಂದು ಪ್ರದರ್ಶನವೂ ಕಲಾಕೃತಿಯಾಗುವ ಸಾಧ್ಯತೆ ಹೊಂದಿರುತ್ತದೆ. ನಾಟಕದ ವಸ್ತು, ತಂತ್ರ, ನಿಲುವು, ನಿರೂಪಣೆಗಳಿಗಿಂತ ಜನರ ಮನರಂಜನೆಯೇ ಮುಖ್ಯವೆಂಬ ನೆಪದಲ್ಲಿ, "ಹೆಚ್ಚು ಸಂಕೀರ್ಣ ನಾಟಕಗಳು ಜನರನ್ನು ಮುಟ್ಟುವುದಿಲ್ಲ" ವೆಂಬ ಕಾರಣ ನೀಡಿ ನಾಟಕವನ್ನು ಹಳಸಲು ಹಾಸ್ಯದ ಮಟ್ಟಕ್ಕೆ ಇಳಿಸಿದಾಗ ಅಥವಾ ನಾಟಕಕಾರ ವ ನಿರ್ದೇಶಕ ನಾಟಕವನ್ನು ತನ್ನ ರಾಜಕೀಯ, ಸಾಮಾಜಿಕ ಘೋಷಣೆಗಳ ವೇದಿಕೆಯನ್ನಾಗಿ ಮಾಡಿಕೊಂಡಾಗ, ಈ ಮಾಧ್ಯಮ ಅರ್ಥ ಕಳೆದುಕೊಳ್ಳುತ್ತಾ ಹೋಗುತ್ತದೆ.

ಇಂದಿನ ಗ್ರಾಮೀಣ ಸಂಘಟನೆಗಳ ನಾಟಕಗಳನ್ನು ಗಮನಿಸಿದಾಗ, ನಾಟಕದ ತಂತ್ರ ಮತ್ತು ವಸ್ತುವಿನಲ್ಲಿಯ ಹೊಸ ಹುಡುಕಾಟ ಗಮನ ಸೆಳೆಯುವಂಥದ್ದು. ಆದರೆ ಕೆಲವೊಮ್ಮೆ ನಮ್ಮ ಭಾರತೀಯ ಮತ್ತು ಪಾಶ್ಚಾತ್ಯ ರಂಗ ಭೂಮಿಗಳ ಸ್ಪಷ್ಟ ಅರಿವಿಲ್ಲದೆ ಎಲ್ಲೋ ನೋಡಿದ್ದ ತಂತ್ರ ಮತ್ತು ವಸ್ತುಗಳನ್ನು ಪಯೋಗಿಸಿ ಹೊಸತನ ನೀಡುವ ಅಪಕ್ವ ಪ್ರಯತ್ನ ಸೋಲುತ್ತದೆ. ಅಲ್ಲದೆ ನಮ್ಮ ಸಾಮಾಜಿಕ, ರಾಜಕೀಯ ಸಮಸ್ಯೆಗಳನ್ನು ಕಲಾತ್ಮಕತೆಯಿಲ್ಲದೆ ವೇದಿಕೆಯ ಮೇಲೆ ಪ್ರದರ್ಶಿಸಿ ಬೊಬ್ಬೆ ಹೊಡೆಯುವುದು ನಾಟಕವಾಗುವುದಿಲ್ಲ.

ರಂಗಭೂಮಿಗೆ ತರುವ ವಸ್ತುವಿಗೆ ಕಲಾತ್ಮಕತೆ ನೀಡಿ, ನೋಡುವವರ ಚಿಂತನೆ ಮತ್ತು ಸಂವೇದನೆ ಅರಳಿಸುವ ಕಲಾಕೃತಿ ನೀಡುವುದು ನಿರ್ದೇಶಕನ ಕರ್ತವ್ಯವಾಗಿರುತ್ತದೆ. ಯಾವುದೇ ಕಲೆ ಸಮಾಜದ ಮೇಲೆ ಪ್ರಭಾವ ಬೀರುವ ಒಂದು ಉತ್ತಮ ಮಾಧ್ಯಮವಾಗಿರುತ್ತದೆಯೇ ಹೊರತು, ಅದೇ ಸಮಾಜೋದ್ಧಾರದ ನೇರ ಸಾಧನವಲ್ಲ ಎನ್ನುವುದನ್ನು ನಾವು ಗಮನಿಸಬೇಕು.

ಈ ಎಲ್ಲಾ ಹಿನ್ನೆಲೆಯಲ್ಲಿ ಗಮನಿಸಿದಾಗ, ಎಸ್. ವಿ. ರಮೇಶ್ ನಿರ್ದೇಶಿಸಿದ 'ಸಿಡಿದವಳು' ನಾಟಕ ಒಂದು ಯಶಸ್ವಿ ರಂಗಪ್ರಯೋಗ. ಶೃಂಗೇರಿಯ ನವೋದಯ ಯುವತಿ ಮಂಡಳಿ ಅಭಿನಯಿಸಿದ ಈ ನಾಟಕ ಸರಳ ರಂಗಸಜ್ಜಿಕೆ ಮತ್ತು ಬೆಳಕು ಸಂಯೋಜನೆಯೊಡನೆ ಅಪೂರ್ವವಾಗಿ ಮೂಡಿ ಬಂತು. ರಂಗಭೂಮಿಯ ಹಳೆಯ ಸಾಂಪ್ರದಾಯಿಕ ಕಟ್ಟುಪಾಡುಗಳನ್ನು ವರ್ಜಿಸಿದ ಬ್ರೆಕ್ಟ್‌ನ 'ಮುಕ್ತರಂಗಭೂಮಿ' (ಎಪಿಕ್ ಥಿಯೇಟರ್) ತಂತ್ರವನ್ನು ಉಪಯೋಗಿಸಿಕೊಂಡು ನಿರ್ದೇಶಕರು ಸಾಮಾನ್ಯ ಕಥಾ ವಸ್ತುವನ್ನು ಕಲಾಕೃತಿಯನ್ನಾಗಿಸುವುದರಲ್ಲಿ ಯಶಸ್ವಿಯಾಗಿದ್ದಾರೆ. ದರಿದ್ರ ಜಾತೀಯತೆಯಿಂದಾಗಿ ಹುಟ್ಟಿದ ಅಸ್ಪೃಶ್ಯತೆಯ ಸಮಸ್ಯೆಯನ್ನು ಕೇಂದ್ರವಾಗಿಟ್ಟುಕೊಂಡು ನಾಟಕ ಉತ್ತಮ ಹಿನ್ನೆಲೆ ಸಂಗೀತ ಮತ್ತು ಅತ್ಯುತ್ತಮ ಅಭಿನಯದಿಂದ ಪ್ರೇಕ್ಷಕರ ಗಮನ ಸೆಳೆಯುವಲ್ಲಿ ಯಶಸ್ವಿಯಾಯಿತು. ಈ ನಾಟಕ ಪೊನ್ನೆ ಕೊಪ್ಪದಲ್ಲಿ ನಡೆದ ಜಿಲ್ಲಾ ಮಟ್ಟದ ಯುವಜನ ಮೇಳದಲ್ಲಿ ಮೊದಲ ಬಹುಮಾನ ಪಡೆದುದರಲ್ಲಿ ಆಶ್ಚರ್ಯವೇನಿಲ್ಲ.

ಬೌದ್ಧಿಕ ಆಕ್ರಮಣದಿಂದ ಜರ್ಝರಿತಗೊಂಡ ಇಂದಿನ ಸಮಾಜಕ್ಕೆ ಬೇಕಿರುವುದು ಪ್ರೀತಿಯ ಆರೈಕೆ. ಅದನ್ನು ನೀಡುವಲ್ಲಿ ರಂಗಭೂಮಿ ಒಂದು ಪ್ರಮುಖ ಪಾತ್ರ ವಹಿಸಬಲ್ಲದು. ರಮೇಶ್ ಇನ್ನೂ ಹೆಚ್ಚು ಹೆಚ್ಚು ಉತ್ತಮ ನಾಟಕಗಳನ್ನು ಕೊಡಲಿ ಎಂದು ಆಶಿಸುತ್ತೇನೆ.

○ ವೈ. ವಿ. ಶೃಂಗೇಶ್ವರ, ಶೃಂಗೇರಿ.

## ರಾಜ್ಯದಿಂದ ರಾಷ್ಟ್ರಮಟ್ಟಕ್ಕೆ ಕೊಪ್ಪದ ಕುವರಿ

ಕೊಪ್ಪದ ಸರ್ಕಾರಿ ಕಿರಿಯ ಕಾಲೇಜಿನಲ್ಲಿ 10ನೇ ತರಗತಿಯಲ್ಲಿ ಓದುತ್ತಿರುವ ಕ್ರೀಡಾ ಪ್ರತಿಭೆ ಕು| ಕೆ. ಎಂ. ಮೀನಾಕ್ಷಿ ಇದೇ ಡಿಸೆಂಬರ್ 15 ರಿಂದ 17 ರವರೆಗೆ ಚಿತ್ರದುರ್ಗದಲ್ಲಿ ನಡೆದ ರಾಜ್ಯ ಮಟ್ಟದ ಪ್ರೌಢಶಾಲಾ ಕ್ರೀಡಾಕೂಟದ ಜಾವೆಲಿನ್ (ಭರ್ಜಿ) ಎಸೆತದ ಸ್ಪರ್ಧೆಯಲ್ಲಿ ಮೊದಲ ಸ್ಥಾನ ಪಡೆದು, ರಾಷ್ಟ್ರ ಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾಳೆ.

ಗುಜರಾತಿನ ಗಾಂಧಿನಗರದಲ್ಲಿ ಡಿ. 26 ರಿಂದ 30 ರವರೆಗೆ ನಡೆವ ರಾಷ್ಟ್ರಮಟ್ಟದ ಕ್ರೀಡಾಕೂಟಕ್ಕೆ ತೆರಳುತ್ತಿರುವ ಈಕೆಗೆ ಯಶಸ್ಸನ್ನು ಹಾರೈಸಿರುವ ಕ್ರೀಡಾಭಿಮಾನಿಗಳ ಪರವಾಗಿ ಆಕೆಗೆ ಎಂ. ಡಿ. ಬಾಲಕೃಷ್ಣರವರು 500 ರೂ.ಗಳನ್ನೂ, ಶಾಲಾ ಶಿಕ್ಷಕ ವೃಂದ 300 ರೂ.ಗಳನ್ನೂ ನೀಡಿ ಪ್ರೋತ್ಸಾಹಿಸಿದ್ದಾರೆ. (ವರದಿ: ಹರ್ಡೀಕರ್)

## ವೇದಿಕೆ

## ಭಾರತೀಯ ಮುಸ್ಲಿಮರು 'ನಡುಗಡ್ಡೆ'ಗಳಾಗಿಯೇ ಉಳಿಯದಿರಲಿ

"ಇದು ಓಲೈಸುವುದೇ? ...." ಎಂಬ ಗಫಾರ್‌ರವರ ಬರಹ ಜನ ಸಾಮಾನ್ಯರಲ್ಲಿ ತಪ್ಪು ಕಲ್ಪನೆ ಹುಟ್ಟಿಸುವ ಗೋಜಲು ವಾದವಾಗಿದೆ.

'ಸಂಪೂರ್ಣ ಕ್ರಾಂತಿ' ಎಂಬ ಪುಸ್ತಕದಲ್ಲಿ ದಾದಾ ಧರ್ಮಾಧಿಕಾರಿಯವರು ಪ್ರಯಾಗದಲ್ಲಿ ಒಬ್ಬ ಬ್ಯಾರಿಸ್ಟರ್ ತನ್ನನ್ನು ತಾನು 'ಮುಸಲ್ಮಾನ್ ಭಾರತೀಯ' ಎಂದು ಪರಿಚಯಿಸಿಕೊಂಡಿದ್ದನ್ನು ಬರೆದಿದ್ದಾರೆ. ಅಂದರೆ ನಮ್ಮ ಸಂವಿಧಾನದಡಿಯಲ್ಲಿ ರಕ್ಷಣೆ, ಸೌಲತ್ತು ಪಡೆಯುವ ಇವರು 'ನಾವು ಭಾರತೀಯರು' ಎಂದು ತಮ್ಮ ರಾಷ್ಟ್ರೀಯತೆಯನ್ನು ಮಾತ್ರ ಹೇಳಿಕೊಳ್ಳಲು ಇಚ್ಛಿಸುವುದಿಲ್ಲವೆಂದರೆ, ಇವರು ಇಲ್ಲಿ 'ಕೇವಲ ವಾಸಿಸುತ್ತಿರುವವರು' ಎಂದು ತಮ್ಮ ವರ್ತನೆಯಿಂದಲೇ ಸಾಬೀತುಪಡಿಸಿದಂತಲ್ಲವೆ?

"....ಈ ದೇಶದ 'ಪ್ರಜೆ'ಗಳೋ ?...." ಎಂದು ನಾಥೂರಾಂ ಗೋಡ್ಸೆಯಂಥವರನ್ನು ಉದಹರಿಸುವ ಇವರು ಕುಖ್ಯಾತ ಕಾಳಸಂತೆಖೋರ ಹಾಜಿ ಮಸ್ತಾನ್, ದಂಗೆಗಳ ಪ್ರಚೋದಕ ಸಲಾಲುದ್ದೀನ್ ಒವೈಸಿ, ಸಿ.ಎಂ. ಇಬ್ರಾಹಿಂರಂಥವರನ್ನು ಹೆಸರಿಸುವುದಿಲ್ಲ.

ಹಾಗೆಯೇ, ಅಲ್ಪಸಂಖ್ಯಾತರಿಗೆ ಯಾವ ಮಹಾನ್ ಸೌಲತ್ತು ದೊರಕಿದೆಯೆಂದು ಕೇಳುವ ಇವರು, ಪಾಕಿಸ್ತಾನ, ಬಾಂಗ್ಲಾ ದೇಶಗಳ ಅಲ್ಪ ಸಂಖ್ಯಾತ ಹಿಂದುಗಳೊಂದಿಗೆ ತುಲನೆ ಮಾಡಿ ವಾದ ಮಂಡಿಸಲಿ.

ಭಾಗಲ್ಪುರ, ಭಿವಂಡಿ ಮುಂತಾದೆಡೆಗಳ ಕೊಲೆ ಪಾತಕರು ಮುಸ್ಲಿಮರಿರಲಿ, ಹಿಂದುಗಳಿರಲಿ, ಅವರು ಖಂಡನಾರ್ಹರು, ಶಿಕ್ಷಾರ್ಹರು. ಇದು ನಾವು ತಲೆತಗ್ಗಿಸಬೇಕಾದ ವಿಚಾರವೇ. ಆದರೆ, ಕಾಶ್ಮೀರದಲ್ಲಿ ದಶಕಗಳಿಂದ ನಡೆಯುತ್ತಿರುವ ಗಲಭೆ-ನರಭಕ್ಷಕ ಕೃತ್ಯಗಳ ಬಗ್ಗೆಯೂ ಪ್ರಸ್ತಾಪಿಸುವುದಿಲ್ಲ ವೇಕೆ?

ಇಟ್ಟಿಗೆ ಮೆರವಣಿಗೆ—ಇತ್ಯಾದಿಗಳಿಗೆ ಹೋಲಿಸಿ, 'ದೀನ-ದಲಿತರ ಸೇವೆಗಿಂತ ದೊಡ್ಡ ದೇವರ ಸೇವೆ ಉಂಟೆ'? ಎಂಬ ಸಲಹೆ ಸ್ವಾಗತಾರ್ಹ. ಈ ಸಂದರ್ಭದಲ್ಲಿ ಶ್ರೀ ರಾಮಕೃಷ್ಣ ಪರಮಹಂಸರು" "ಹೇಳುವ ಮೊದಲು ಆಚರಿಸು" ಎಂದಂತೆ, ಮುಸ್ಲಿಮರ ಧಾರ್ಮಿಕ ಕಲಾಪ, ಉರುಸ್ ಇತ್ಯಾದಿಗಳಿಗೂ ಮೇಲಿನ ಮಾತು ಅನ್ವಯಿಸಿದರೆ ಎಲ್ಲರಿಗೂ ಅನುಕರಣೀಯವಾದೀತು !

ಆಕ್ರಮಣಕಾರರ ದುರ್ನಡತೆಗೆ ಗುರಿಯಾಗಿ ಭಗ್ನಾವಶೇಷಗೊಂಡಿರುವ ಕೋಟಿ ಕೊತ್ತಲಗಳು, ಗುಡಿ-ಗೋಪುರಗಳು, ಕಲೆ-ಸಂಸ್ಕೃತಿಗಳ ಸ್ಮಾರಕಗಳು ಹಾಗೂ ಆಕ್ರಮಣಕಾರರು ಯಾರು-ಯಾರು ಎಂಬುದೆಲ್ಲ ಇತಿಹಾಸ ಓದಿದರೆ ಕಣ್ಣಿಗೆ ಕಟ್ಟುವ ನಿರ್ವಿವಾದ ಅಂಶಗಳು.

ನ್ಯಾಯಾಲಯದ ತೀರ್ಪಿಗೆ ಗೌರವ, ತಾಳ್ಮೆಗಳ ಮಾತಾಡುವ ಮೊದಲು ಕೊಂಚ ಆತ್ಮವಿಮರ್ಶೆ ಮಾಡಿಕೊಳ್ಳುವುದು ಒಳ್ಳೆಯದು

ಅಯೋಧ್ಯೆ, ಸರಯೂ, ಶ್ರೀರಾಮ- ಈ ಮೂರೂ ಅಬಾಧಿತವಾದ ಅಂಶಗಳು.

(3ನೇ ಪುಟಕ್ಕೆ)

### ಇದು ಸಂವಾದ

1. ಮಂದಿರ-ಮಸೀದಿ ವಿವಾದದ ಬಗ್ಗೆ ಜಿಜ್ಞಾಸೆಗಾಗಿ ಆರಂಭಿಸಿದ ಈ ವೇದಿಕೆ ಸಂವಾದಕ್ಕಾಗಿ ಮಾತ್ರ, ಅವಹೇಳನಕ್ಕೆ, ತುಚ್ಛೀಕರಣಕ್ಕೆ ಅಲ್ಲ. ಆದರೆ ಇದಕ್ಕೆ ಬರುತ್ತಿರುವ ಕೆಲವು ಬರಹಗಳ ಧಾಟಿ ಸಂವಾದದಂತಿರದೆ, ಅವನ್ನು 'ಎಡಿಟ್' ಮಾಡಿಯೂ ಪ್ರಕಟಿಸುವುದಕ್ಕೆ ಸಮಾಧಾನವಾಗುವುದಿಲ್ಲ

2. ಬರೆದದ್ದನ್ನೇ ಬರೆಯುವುದು ಬೇಡ. ಪ್ರಶ್ನೆಗಳು ವಿವೇಚನೆಗಾಗಿ. 'ಸವಾಲಿಗೆ ಮರು ಸವಾಲ್'ಗಾಗಿಯಲ್ಲ. ಸಂಯಮದ ಸಂಕ್ಷಿಪ್ತ ಬರಹಗಳಿಗೆ ಆದ್ಯತೆ.

—ಸಂಪಾದಕ.

## ಧರ್ಮ ಧರ್ಮವೆಂಬರು ಧರ್ಮವ ಬಲಿ ಕೊಂಬರು !

ಪ್ರಕೃತಿ ಮಾತೆಯ ಮಡಿಲಲ್ಲಿ ಹುಟ್ಟಿ, ನೆಮ್ಮದಿಯಾಗಿ ಅಣ್ಣ-ತಮ್ಮಂದಿರಂತೆ ಬದುಕುತ್ತಿದ್ದ ಕಪ್ಪೆ ಮತ್ತು ಇಲಿ 'ಕಲಕ ಸನ್ಯಾಸಿ'ಯ ಮಾತು ಕೇಳಿ ನೀರಿನಿಂದಲೂ ಬಿಲದಿಂದಲೂ ಹೊರಗೆ ಬಂದು "ನಾನು ಶ್ರೇಷ್ಠ, ನಾನೇ ಬಲಿಷ್ಠ" ಎಂದು ಬಡಿದಾಡ ತೊಡಗಿದಾಗಲೇ ಅವೆರಡರಲ್ಲಿ ಯಾರೂ ಶ್ರೇಷ್ಠರೂ ಅಲ್ಲ, ಬಲಿಷ್ಠರೂ ಅಲ್ಲ ಎಂಬುದು ನೋಡಿದವರಿಗೆಲ್ಲ ತಿಳಿದು ಹೋಗಿತ್ತು; ಹದ್ದೊಂದು ಹಾರಿ ಬಂದು ಅವೆರಡನ್ನೂ ಒಂದೇ ಹಾರಿಗೆ ಹೊತ್ತೊಯ್ದಾಗ ಇದು ಸಾಬೀತಾಗಿ ಹೋಯಿತು ಆದರೆ ಆಗ ಕಾಲ ಮಿಂಚಿತ್ತು ! ('ಪಂಚತಂತ್ರ' ಕಥೆ)

ನನ್ನದು ಧರ್ಮ, ನಿನ್ನದು ಅಧರ್ಮ; ನನ್ನದು ಸ್ವಧರ್ಮ, ನಿನ್ನದು ಪರಧರ್ಮ.... ಎಂದು ನಾವು ಬಡಿದಾಡಿಕೊಳ್ಳುತ್ತಿದ್ದಂತೆ ಶೋಷಣೆಯ ರಾಕ್ಷಸ ಹದ್ದು, ದಾರಿದ್ರ್ಯ-ಅಜ್ಞಾನಗಳೆಂಬ ತನ್ನ ಕೊಕ್ಕು-ಪಂಜಗಳಿಂದ ನಮ್ಮನ್ನು ಹೊತ್ತೊಯ್ದು ಮುಕ್ಕುವುದನ್ನು ನೋಡಿ ಜಗತ್ತು-ಆ 'ಧರ್ಮ ಈ ಧರ್ಮವೆಂಬರು, ಮನುಜ ಧರ್ಮವ ಬಲಿ ಕೊಂಬರು !" ಎಂದು ವಿಷಾದದಿಂದ ನಿಡು ಸುಯ್ಯುವುದು ಕೇಳುತ್ತಿದೆಯೆ ?

—'ಜಂಗಮ'

## ಉರಿ—ರಥ ಯಾತ್ರೆಯಿಂದ ಅಲ್ಲ

"ರಥ ಯಾತ್ರೆ ಇಡೀ ರಾಷ್ಟ್ರವನ್ನೇ ಉರಿಯುವಂತೆ ಮಾಡಿತು" ಎಂಬ ವೈ.ವಿ. ಚಂದ್ರಶೇಖರ, ಶೃಂಗೇರಿ ಇವರ ಹೇಳಿಕೆ ('ಮುಂಜಾವು' 2-12-90) ಸರಿಯಲ್ಲ. ರಥಯಾತ್ರೆ ನಡೆಯುತ್ತಿರುವಷ್ಟು ದಿನವೂ ಎಲ್ಲಿಯೂ ಬೃಹತ್ ಜನಸಾಗರದಲ್ಲಿ ಒಂದಿಷ್ಟೂ ಹಿಂಸೆ, ಉರಿ ಯಾವುದೂ ಹೊತ್ತಿರಲಿಲ್ಲ.

ಆದರೆ ಕೇಂದ್ರ ಸರ್ಕಾರ ಹಾಗೂ ಬಿಹಾರ ರಾಜ್ಯ ಸರ್ಕಾರಗಳ ತಪ್ಪು ನಿಲುವಿನಿಂದ ಅಡ್ವಾಣಿಯವರ ಬಂಧನ ಮತ್ತು ರಥಯಾತ್ರೆ ತಡೆಯುವಿಕೆಯ ನಂತರ, ಅದನ್ನು ವಿರೋಧಿಸಿದವರನ್ನು ನಡೆಸಿಕೊಂಡ ರೀತಿ ಅತ್ಯಂತ ಹೇಯವಾಗಿತ್ತಲ್ಲದೆ ಮುಂದೆ ಸಮಯ ಸಾಧಕರಿಂದ ಗಲಭೆಗಳು ನಡೆದವು. ಆದರೆ ಚಂದ್ರಶೇಖರರವರ ಅನಿಸಿಕೆಯಂತೆ ರಥಯಾತ್ರೆ ರಾಷ್ಟ್ರದ ಉರಿಯುವಿಕೆಗೆ ಕಾರಣವಾಗಲಿಲ್ಲ ಎನ್ನುವುದು ಸೂರ್ಯನಷ್ಟೇ ಸ್ಪಷ್ಟ.

ಹಿಂದೂ ಜನಸಾಗರದ ಒಗ್ಗಟ್ಟು ಎಷ್ಟಿದೆ ಎಂಬುದನ್ನು ಅಡ್ವಾಣಿಯವರ ರಥಯಾತ್ರೆ ತೋರಿಸಿಕೊಟ್ಟಿತೇ ಹೊರತು ಎಲ್ಲಿಯೂ ಈ ಜನ ಸಾಗರ ಹಿಂಸೆಗಿಳಿದ ಅಥವಾ ಹಿಂಸೆಗೆ ಪ್ರಚೋದನೆ ನೀಡಿದ ಉದಾಹರಣೆ ಇದೆಯೆ ?

(3ನೇ ಪುಟಕ್ಕೆ)

## ಡಾ|| ವೈದ್ಯರ ಬಗ್ಗೆ ನನ್ನ ಅನುಭವ: ಹೀಗೊಂದು—ಹಾಗೊಂದು

ಕೆಲವು ದಿನಗಳ ಹಿಂದೆ ಹರಿಹರಪುರದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಹೋಗಿದ್ದೆ. ಆಸ್ಪತ್ರೆಯು ತುಂಬಾ ಜನ ಕಾಣಿಸುತ್ತಿದ್ದರು. ಒಂದು ವರ್ಷದ ಹಿಂದೆಯೂ ಕೆಲವು ಬಾರಿ ಆಸ್ಪತ್ರೆಗೆ ಹೋಗಿದ್ದೆ ಆದರೆ ಹೀಗೆ ಜನ ತುಂಬಿರುತ್ತಿದ್ದ ದಿನಗಳನ್ನು ಕಂಡಿರಲಿಲ್ಲ ಹಿಂದೆ ಇಲ್ಲಿಯ ಜನಗಳಿಗೆ ಖಾಯಿಲೆ ಬರುತ್ತಿರಲಿಲ್ಲವೋ ಅಥವಾ ಈಗ ರೋಗಿಗಳ ಸಂಖ್ಯೆ ಜಾಸ್ತಿಯಾಗಿದೆಯೋ ಯೋಚಿಸುವಂತಾಯಿತು

ನನಗೆ ಒಂದು ಮೆಡಿಕಲ್ ಸರ್ಟಿಫಿಕೇಟ್ ಬೇಕಿತ್ತು. ನನ್ನ ಸರದಿ ಬಂದಾಗ ಒಳಗೆ ಹೋದೆ, 'ನಮಸ್ಕಾರ' ಅಂದೆ ಪ್ರತಿ ನಮಸ್ಕಾರ ಕೇಳಿ ಆಶ್ಚರ್ಯವಾಯಿತು!

"ಕುಳಿತುಕೊಳ್ಳಿ, ಏನಾಗಬೇಕಿತ್ತು?" ಕೇಳಿದರು ಡಾಕ್ಟರ್ ; ಹೇಳಿದೆ

ತಮಗೆ ಅಗತ್ಯವಿದ್ದ ಪ್ರಶ್ನೆಗಳನ್ನು ಕೇಳಿ ಸರ್ಟಿಫಿಕೇಟ್ ಬರೆದು ನನ್ನ ಕೈಗೆ ಕೊಟ್ಟು "ಹೀಗಿದ್ದರೆ ಸಾಕೇ?" ಎಂದು ಕೇಳಿದರು. 'ಸಾಕು ಸಾರ್' ಎಂದೆ

ಸಹಿ ಹಾಕಿ, ಸೀಲ್ ಹಾಕಿ ನಗುತ್ತಾ ನನ್ನ ಕೈಗಿತ್ತರು. ತೆಗೆದುಕೊಳ್ಳುತ್ತಾ ಅಭ್ಯಾಸಬಲದಂತೆ ನನ್ನ ಬಲಗೈ ಜೇಬಿನೊಳಗೆ ಹೋಯಿತು. ಕೂಡಲೇ ಡಾಕ್ಟರು "ಛೆ, ಛೆ ಅದೆಲ್ಲಾ ಬೇಡ" ಎಂದರು. ಆಶ್ಚರ್ಯವಾಯಿತು, ಹಾಗೂ ಸಂತೋಷವೂ ಆಯಿತು. ಡಾಕ್ಟರ್ ಕೋದಂಡರಾಂರವರ ಪರಿಚಯ ನನಗಾದದ್ದು ಹೀಗೆ,

ಮೊನ್ನೆ ನಮ್ಮೂರಿನ ಕೂಲಿಯವನೊಬ್ಬ ಚಿಕಿತ್ಸೆಗೆಂದು ಹರಿಹರಪುರ ಆಸ್ಪತ್ರೆಗೆ ಹೋಗಿದ್ದ. ಪರೀಕ್ಷೆ ಮಾಡಿ ಇಂಜೆಕ್ಷನ್, ಔಷಧಿ, ಎಲ್ಲಾ ಕೊಟ್ಟು ನಂತರ "ಬರೆದು ಕೊಡುತ್ತೇನೆ, ಈ ಔಷಧಿ ಕೊಂಡುಕೊಳ್ಳಬೇಕು" ಅಂದರಂತೆ ಈತ ಚಪ್ಪೆ ಮುಖ ಮಾಡಿಕೊಂಡು, "ಸ್ವಾಮಿ ದುಡ್ಡು ಕೊಟ್ಟು ಕೊಳ್ಳಲು ನಾನು ಬಡವ. ಖಾಯಿಲೆ ದೆಸೆಯಿಂದ ಕೂಲಿಗೆ ಹೋಗದೆ ಬಹಳ ದಿನವಾಯ್ತು" ಎಂದನಂತೆ ಆಗ ಡಾಕ್ಟರು ಆ ಔಷಧಿಗಳನ್ನೂ ಕೊಟ್ಟು ಕಳುಹಿಸಿದರಂತೆ. ಆತನೇ ನನ್ನ ಬಳಿ ಹೇಳಿಕೊಂಡ. ಹರಿಹರಪುರದಲ್ಲಿ ಯಾರನ್ನು ಕೇಳಿದರೂ ಡಾ || ಕೋದಂಡರಾಂರವರ ಒಗ್ಗೆ ಒಳ್ಳೆಯ ಮಾತೇ ಕೇಳಿಬರುತ್ತದೆ

ಎರಡು ವರ್ಷಗಳ ಹಿಂದಿನ ಒಂದು ಘಟನೆ ನೆನಪಿಗೆ ಬರುತ್ತದೆ ನನ್ನ ಆತ್ಮೀಯರೊಬ್ಬರಿಗೆ ಸೀರಿಯಸ್ ಆಗಿ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆ ಆಸ್ಪತ್ರೆಗೆ ಹೋಗುವಾಗ ಮಧ್ಯಾಹ್ನ 1-30 ಘಂಟೆ. ಡಾಕ್ಟರ್‌ಗಳೆಲ್ಲಾ ಊಟಕ್ಕೆ ಹೋಗಿದ್ದರು. ಒಬ್ಬರು ಸಿಸ್ಟರ್ ಹೇಳಿದರು : "ಇವರಿಗೆ ತುಂಬಾ ಸೀರಿಯಸ್ ಇರುವುದರಿಂದ ಆರ್ ಎಂ.ಓ ಮನೆಗೇ ಕರೆದುಕೊಂಡು ಹೋಗಿ, ಅಲ್ಲಿಯೇ ಚೆಕಪ್ ಮಾಡಿ ಚೀಟಿ ಕೊಡುತ್ತಾರೆ ನಾವು ಕೂಡಲೇ ಶುಶ್ರೂಷೆ ಮಾಡುತ್ತೇವೆ. ಇಲ್ಲದಿದ್ದರೆ ಅವರು ಬರುವುದು 4 ಗಂಟೆಯಾಗುತ್ತೆ" ಅಂದರು.

ಅವರ ಮನೆಗೆ ಹೋಗಿ ಬಾಗಿಲು ತಟ್ಟಿದೆ. ಡಾಕ್ಟರ್ ಸ್ವತಃ ಬಾಗಿಲು ತೆರೆದರು. 'ನಮಸ್ಕಾರ ಸಾರ್' ಎಂದು ಹಲ್ಲು ಕಿಸಿದೆ. ಗಂಟುಮುಖದಿಂದ 'ಏನಾಗಬೇಕಿತ್ತು?' ಎಂದರು "ಸಾರ್, ಇವರಿಗೆ ಸೀರಿಯಸ್; ಹೀಗೀಗಾಗುತ್ತೆ" ಎಂದೆ. "ಇಲ್ಲಿಗ್ಯಾಕ್ ಬಂದ್ರಿ? ಆಸ್ಪತ್ರೆ ಇರೋದು ಅಲ್ಲಿ ಅಲ್ಲಿಗ್ ಹೋಗಿ. ಆಮೇಲೆ ನೋಡ್ತೀನಿ" ಎಂದು ದಬಾಯಿಸಿದರು. ಆದರೂ ನಾನು ಬಿಡದೆ. "ಇಲ್ಲೇ ಸ್ವಲ್ಪ ಚೆಕಪ್ ಮಾಡಿ ಚೀಟಿ ಕೊಡಿ ಸಾರ್" ಎಂದು ಅಂಗಲಾಚಿದೆ "ನೋಡ್ರೀ, ನನ್ನ ಒಂದೊಂದು ನಿಮಿಷವೂ ಸಾವಿರ ಸಾವಿರ ರೂಪಾಯಿ ಬೆಲೆ ಬಾಳುತ್ತೆ. ಹೀಗೆಲ್ಲಾ ಬಂದು ನನ್ನ ಸಮಯ ಹಾಳು ಮಾಡ ಬಾರದು" ಎಂದು ಹೇಳಿ ಕಣ್ಣು ಕೆಕ್ಕರಿಸುತ್ತಾ, ಒಂದಷ್ಟು ಚೆಕಪ್ ಮಾಡಿದಂತೆ ಮಾಡಿ, ಚೀಟಿ ಬರೆದು ಕೊಟ್ಟು 'ಹೂಂ ಹೋಗಿ' ಎಂದರು. 'ಥ್ಯಾಂಕ್ಸ್' ಎಂದು ಹೊರಟೆ "ಎಲ್ಲಿ, ಫೀಸ್ ತೆಗೀರಿ. ಹಾಗೇ ಹೊರಟು ಬಿಟ್ರಲ್ಲಾ!" ಎಂದರು. 25 ರೂ. ಕೊಟ್ಟು ನಡುಗುತ್ತಾ ಹೊರ ಬಂದೆ.

ಇಂಥವರೇ ಹೆಚ್ಚಾಗಿರುವ ನಮ್ಮ ಆರೋಗ್ಯ ಇಲಾಖೆಯಲ್ಲಿ ಡಾ|| ಕೋದಂಡರಾಂ ರಂಥವರು ಒಬ್ಬೊಬ್ಬರಿರುವುದು ನಮ್ಮ ಅದೃಷ್ಟವೇ ಸರಿ ಆದರೆ ನಮ್ಮೊಳಗಿನ ಅವರನ್ನು ಎಷ್ಟು ಸಮಯ ಉಳಿಸಿಕೊಳ್ಳಬಲ್ಲೆವು?

ಕಾದು ನೋಡಬೇಕಾಗಿದೆ

—ಎಚ್. ಎಸ್. ಪಾಂಡುರಂಗ,
ಹುಲುಗಾರು– ತ್ಯಾನುವಳ್ಳಿ.

## ಓದುಗರ ಪತ್ರಗಳು

## ಭಾರತೀಯ ಮುಸ್ಲಿಮರು 'ಮತಗಟ್ಟೆ'ಗಳಾಗದಿರಲಿ

(2ನೇ ಪುಟದಿಂದ)

ನದಿಯ ಶಾಸ್ತ್ರಗಳು ಬದಲಾಗುತ್ತವೆ [illegible] ವುದು ಎಲ್ಲರಿಗೂ ತಿಳಿದ ವಿಚಾರ. [illegible] ದ್ದೂ, ಅದೇಕೋ [illegible] ಅಲ್ಲಿದೆ–ಇಲ್ಲಿತ್ತು ಎನ್ನುವುದು ಮೋಸಂಬಾ ವಾದ ಮಾತ್ರ.

"ಮುಸ್ಲಿಂ ಧರ್ಮೀಯರು ಯಾವ ವಿಶಿಷ್ಟ ಆಗ್ರಹಕ್ಕೂ ಒಳಗಾಗದ [illegible], ವಿನಮ್ರ ಬುದ್ಧಿಯಿಂದಾಗ ಮಾತ್ರ ಸ್ವತಂತ್ರ ವಿಚಾರ ಮಾಡಲು ಸಮರ್ಥರಾಗುವುದು" ಎಂಬ ಮಾತನ್ನು ಸಮರ್ಥಿಸುವ ವ್ಯಕ್ತಿತ್ವವುಳ್ಳ ನಕ್ವಿ ಮತ್ತು ಸಲ್ಮಾನ್ ರಷ್ದಿ ಯಂಥವರನ್ನು 'ಅಲ್ಪ'ರನ್ನಾಗಿ ಪರಿಗಣಿಸುತ್ತೀರೆಂದರೆ ಆಶ್ಚರ್ಯ [illegible] ಗಿಲ್ಲ ಕನ್ನಡದ ಕವಿ ನಿಸಾರ್ ಅಹಮದ್ ಸಂದರ್ಶನವೊಂದರಲ್ಲಿ ತಿಳಿಸಿದ್ದಂತೆ "ನಾವು ಭಾರತೀಯ ಮುಸ್ಲಿಮರು ಮತಗಟ್ಟೆಗಳಂತೆ" ಎಂಬ ಮಾತನ್ನು ಇನ್ನು ಮುಂದೆಯೂ ಉಳಿಸಿ ಬೆಳೆಸಿಕೊಂಡು ಬರುವುದಿಲ್ಲವೆಂದು ಆಶಿಸೋಣವೆ?

—ಕೆ. ಎಸ್. ಚಂದ್ರಶೇಖರ್,
ಶೃಂಗೇರಿ.

## ಉರಿ—ರಥಯಾತ್ರೆಯಿಂದ ಅಲ್ಲ

(2ನೇ ಪುಟದಿಂದ)

ಇಲ್ಲಿ ಜನ, ಧರ್ಮದ ಬಗೆಗಿನ ಅಂಧಕಾರದ ಮುಸುಕಿನಲ್ಲಿ ಬಿದ್ದಿದ್ದಾರೆ ಎಂದಿರುವ ಚಂದ್ರಶೇಖರ ಅವರು ಮತಾಂಧತೆಯಿಂದ ಕೇವಲ ಗುಮ್ಮಟಕ್ಕಾಗಿ ಜಗಳ ಕಾಯುವವರನ್ನು ಏನೆಂದು ಕರೆಯುತ್ತಾರೆ ?

"ಪೈಶಾಚಿಕ ರೀತಿಯಲ್ಲಿ ವರ್ತಿಸುತ್ತಿದ್ದೇವೆ" ಎಂದು ಒಂದೆಡೆ ಬರೆದಿರುವ ಇವರ ಬಳಿ, ಇತಿಹಾಸದಲ್ಲಾಗಲಿ, ವರ್ತಮಾನದಲ್ಲಾಗಲಿ ಹಿಂದೂಗಳೇ ಮೊದಲಾಗಿ ಬೇರೆ ಧರ್ಮದವರನ್ನು ಕೆಣಕಿದ ಉದಾಹರಣೆ ಉಂಟೆ ?

ಭಾರತದಲ್ಲಿರುವವರೆಲ್ಲರಿಗೂ ಒಂದೇ ಕಾನೂನು, ಒಂದೇ ರೀತಿಯ ಸವಲತ್ತುಗಳು ಅನ್ವಯಿಸುವುದಾದಲ್ಲಿ ರಾಮ ಮಂದಿರದ ಅವಶ್ಯಕತೆಯಿಲ್ಲ. ಇದು ನಿಜವಾದ ಜಾತ್ಯಾತೀತತೆ. ಅದಿಲ್ಲದೆ, ಈಗಿನಂತೆ ಅಲ್ಪಸಂಖ್ಯಾತರನ್ನು ಓಲೈಸುವುದೇ ಆದರೆ ಬಹುಸಂಖ್ಯಾತರ ಭಾವನೆಗಳ ಪ್ರತೀಕವಾದ ಶ್ರೀ ರಾಮ ಮಂದಿರ ಬೇಕು.

ಸಮಯ ಸಾಧಕ ರಾಜಕಾರಣಿಗಳಿಂದ ಹಿಂದೂ ಸಮಾಜದ ಒಗ್ಗಟ್ಟಿಗೆ ಧಕ್ಕೆ ಬರುತ್ತಿರುವಾಗ ನಮಗೆ ರಾಮ ಮಂದಿರದ ನಿರ್ಮಾಣ ಆಗಲೇ ಬೇಕು.

ಒಂದು ಕೋಮನ್ನು ಪ್ರತಿನಿಧಿಸುವ ಮುಸ್ಲಿಂ ಲೀಗ್ ಎಂಬ ಪಕ್ಷ ಅಸ್ತಿತ್ವದಲ್ಲಿರುವ ರಾಷ್ಟ್ರವೂ ಒಂದು ಜಾತ್ಯಾತೀತ ರಾಷ್ಟ್ರವೆ ?

—ಕೆ. ಎ. ಹರೀಶ್, ಕಾನೂರು.

## 'ಸಂಭಾವನೆ' ನಿಲ್ಲಿಸಲು ನಮ್ಮದೂ ಬೆಂಬಲವಿದೆ

ಪ್ರಿಯರೇ,

ಕಲ್ಲುಗುಡ್ಡೆ ಗ್ರಾಮಸ್ಥರು ಮಲೆನಾಡಿನಲ್ಲಿ ಸಂಭಾವನೆ ಪಿಡುಗು ತಡೆಗಟ್ಟಲು 9-12-90ರ 'ಮುಂಜಾವು' ವಾರ ಪತ್ರಿಕೆಯಲ್ಲಿ ಕರೆ ಕೊಟ್ಟಿದ್ದಾರೆ

ಸಂಭಾವನೆ ಒಂದು ಪ್ರಸ್ತುತ ಸಮಸ್ಯೆ. ನಾವು ಬೆಳೆದದ್ದನ್ನು ಯಾರೋ ಬಂದು ಕೇಳುತ್ತಾರೆ. ಕೆಲವೊಮ್ಮೆ ದೇವಸ್ಥಾನದ ಹೆಸರು ಬೇರೆ. ಹಿಂದಿನಿಂದ ಬಂದ ಸಂಪ್ರದಾಯವಾಗಿರುವ ಈ ಪಿಡುಗು ತಡೆಗಟ್ಟುವುದು ಅಷ್ಟು ಸುಲಭದ ಮಾತಲ್ಲ, ಕಾರಣ, ಕೊಟ್ಟು ಕೊಟ್ಟು ಅಭ್ಯಾಸವಾಗಿರುವ ಕೆಲ ಹಿಂದಿನವರು ಎಲ್ಲ ಮನೆಗಳಲ್ಲೂ ಇರುತ್ತಾರೆ.

ಪರಿಚಿತ ಚಿಕ್ಕ ಪುಟ್ಟ ಅಧಿಕಾರಿಗಳು ಅಡಿಕೆ, ಏಲಕ್ಕಿ, ಕಾಫಿ ಬೀಜಗಳನ್ನು ಕೇಳುತ್ತಾರೆ. ಇದನ್ನು ಸಂಭಾವನೆ ಎನ್ನೋಣವೇ? ಇಂತಹ ಮಂದಿಗೆ ನಾವು ಬೆಳೆದದ್ದನ್ನು ಪುಕ್ಕಟೆ ಕೊಡೋಣವೆ ಅಥವಾ ಬಿಡೋಣವೇ? ಕೊಟ್ಟರೂ ಕಷ್ಟ, ಬಿಟ್ಟರೆ ಬಹಳ ಕಷ್ಟ; ಬಿಟ್ಟನಲ್ಲಿ ಬಿಸಿ ತುಪ್ಪದಂತೆ!

ಮಲೆನಾಡಿನ ಕೆಲವೆಡೆಗಳಲ್ಲಿ ಈಗ ಈ ಸಂಭಾವನೆ ಪದ್ಧತಿ ನಿಂತಿದೆ ನಮ್ಮ ಗ್ರಾಮದಲ್ಲಿ ಮೊದಲಿಗಿಂತ ಬಹಳ ಕಡಿಮೆ. ವೈದ್ಯದವರಂತೂ ಬರುವುದೇ ಇಲ್ಲ. ಹಿಂದೆ ಮೊದಲನೇ ಹಂಡೆ ಅಡಿಕೆಯನ್ನು ಸಂಭಾವನೆಗೆಂದೇ ತೆಗೆದಿಡುವುದು ವಾಡಿಕೆಯಲ್ಲಿತ್ತು ಸ್ವಂತಕ್ಕಾಗಿ ಸಂಭಾವನೆಗೆ ಬರುವವರನ್ನು ಹಾಗೆಯೇ ಬರಿಗೈಯಲ್ಲಿ ವಾಪಸ್ ಕಳಿಸಿ ಈಗ ಈ ಪಿಡುಗು ಸ್ವಲ್ಪ ಕಡಿಮೆಯಾಗಿದೆ. ಆದರೂ ಕೆಲವೊಮ್ಮೆ ಧಾಂಡಿಗರಂತಿರುವ ದುಡಿದುಣ್ಣಬಹುದಾದ ಮಂದಿ ಏನಾದರೂ

(6ನೇ ಪುಟಕ್ಕೆ)

## 'ಬೌದ್ಧಿಕ ಸವಾರಿ'ಯೋ, ಚಾರಿತ್ರ್ಯ ಹರಣವೋ ?

ಪ್ರಿಯರೆ,

9-12-90 ರ ತಮ್ಮ ಪತ್ರಿಕೆಯಲ್ಲಿ ಬಂದ 'ಶೃಂಗೇರಿ ಗ್ರಂಥಪಾಲಕರ ಬೌದ್ಧಿಕ ಸವಾರಿ' ಎಂಬ ಆರೋಪ ಚಾರಿತ್ರ್ಯಹಾನಿಯನ್ನು ಉಂಟುಮಾಡುವ ಉದ್ದೇಶದಿಂದಲೇ ಬರೆದದ್ದು ಎಂದು ನನಗನ್ನಿಸಿದೆ. ಏಕೆಂದರೆ, ವಿದ್ಯಾರ್ಥಿಗಳಿಗೆ ಅನಾನುಕೂಲವಾಗುವ ಯಾವುದೇ ಸಂಗತಿಯನ್ನು ಪ್ರಿನ್ಸಿಪಾಲರೂ ಆಡಳಿತ ಮಂಡಳಿಯವರೂ ಸರಿಪಡಿಸಲು ಸಿದ್ಧರಿರುವಾಗ, ಅವರ ಗಮನಕ್ಕೆ ತಾರದೇ ಪತ್ರಿಕೆಯಲ್ಲಿ ಪ್ರಚಾರ ಮಾಡುವ ಉದ್ದೇಶ ಚಾರಿತ್ರ್ಯಹರಣಕ್ಕಾಗಿಯೇ ಎಂದು ತಿಳಿಯಬೇಕಾಗುತ್ತದೆ.

ಶೃಂಗೇರಿ ಕಾಲೇಜು ಗ್ರಂಥಪಾಲಕನಾಗಿ ನಾನು ಸರ್ಕಾರದ ಕಟ್ಟು ನಿಟ್ಟಿನ ನಿರ್ಬಂಧ ದಿಂದ ಅಥವಾ ಯಾವುದೇ ವಶೀಲಿಯಿಂದ ನೇಮಕವಾಗಿಲ್ಲ. ಸ್ವಾನಸ್ಕೆ ಬೇಕಾದ ಗ್ರಂಥಾಲಯ ವಿಜ್ಞಾನದ ಪದವಿಯನ್ನು ಅನುಭವವನ್ನೂ ಹೊಂದಿದ್ದೇನೆ. ನಿಷ್ಪಕ್ಷಪಾತವಾಗಿ ಓದುಗರಿಗೆ, ವಿದ್ಯಾರ್ಥಿ ವೃಂದಕ್ಕೆ ನನ್ನಿಂದಾದ ಸೇವೆ ಸಲ್ಲಿಸುತ್ತಿದ್ದೇನೆ.

ನಮ್ಮ ಗ್ರಂಥಾಲಯದಲ್ಲಿ ಉತ್ತಮ ಗ್ರಂಥ ಸಂಪತ್ತಿದೆ, ಅದನ್ನು ಇಲ್ಲಿ ಪ್ರಸ್ತುತ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳೇ ಅಲ್ಲದೆ, ಉನ್ನತ ವ್ಯಾಸಂಗಕ್ಕೆ ಹೋಗಿರುವ ಹಳೆಯ ವಿದ್ಯಾರ್ಥಿಗಳೂ, [illegible] ಕೇಂದ್ರ ಪ್ರಯೋಜನ ಹೊಂದಿ, ಉತ್ತಮ [illegible] ಗಳಿಸುತ್ತಿರುವುದು [illegible]. [illegible] ಉತ್ತಮ [illegible] ಯಾವಾಗ [illegible] ಎಂಬುದನ್ನು [illegible] ಬರೆದವರು ಗ್ರಂಥಪಾಲಕರನ್ನು [illegible] ತಿಳಿಸಿಕೊಡಲಿ.

'ಬೌದ್ಧಿಕ ಸವಾರಿ' ಎಂದರೆ ಏನು? [illegible] ಪತ್ರಿಕೆಗಳನ್ನು [illegible] ಓದಬೇಕು ಎಂಬ [illegible] [illegible] ಬೌದ್ಧಿಕ ಸವಾರಿ? [illegible] ಈ [illegible] [illegible] [illegible] [illegible].

ಒಂದೇ [illegible], ಈ ಗ್ರಂಥ [illegible] [illegible] ಪುಸ್ತಕ [illegible] ಪತ್ರಿಕೆಗಳು [illegible] 'ಶೃಂಗೇರಿ' [illegible]

([illegible])

# ಕರ್ನಾಟಕ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್ : ಮಂಗಳೂರು - 575 003

ಶಾಖೆ : ಕುದುರೆಗುಂಡಿ

ತಾ॥ 15-12-1990

## ಏಲಂ ನೋಟೀಸು

ಈ ಕೆಳಗಿನ ಮಹನೀಯರು ನಮ್ಮ ಶಾಖೆಯಿಂದ ಚಿನ್ನಾಭರಣ ನಗಗಳ ಈಡಿನ ಮೇಲೆ ಪಡೆದ ಸಾಲವನ್ನು/ಹಾಗೂ ಇತರ ಸಾಲಗಳನ್ನು ಸ್ವತಃ ಪಡೆದು ಯಾ ಜಾಮೀನುದಾರರಾಗಿದ್ದು, ವಾಯಿದೆಗೆ ಸರಿಯಾಗಿ ಮರು ಪಾವತಿ ಮಾಡದೇ ಇದ್ದುದರಿಂದ ಸದ್ರಿಯವರಿಗೆ ರಿಜಿಸ್ಟ್ರಿ ನೋಟೀಸು ಮೂಲಕ ಕೇಳಿಕೊಂಡಿದ್ದಂತೆ ಕೆಲವರಿಗೆ ಕಳುಹಿಸಿದ ರಿಜಿಸ್ಟ್ರಿ ನೋಟೀಸುಗಳು ಕಾರಣಾಂತರಗಳಿಂದ ನಮಗೇನೇ ವಾಪಾಸು ಬಂದಿರುವುದರಿಂದಲೂ ಸದರಿಯವರಿಗೆ ವ ಅವರ ವಾರೀಸುದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಸಾಲದ ಬಾಬ್ತು ಸಲ್ಲತಕ್ಕ ಮೊಬಲಗನ್ನು ಇದೇ ತಿಂಗಳ ತಾರೀಖು 31-12-90ರ ಒಳಗೆ ಬ್ಯಾಂಕಿಗೆ ಮರು ಪಾವತಿ ಮಾಡಲು ತಪ್ಪಿದಲ್ಲಿ ಸದ್ರಿಯವರು ನಮ್ಮಲ್ಲಿ ಅಡವಿಟ್ಟ ನಗಗಳನ್ನು ತಾ. 9-1-1991 ಅಪರಾಹ್ನ ಗಂಟೆ 3-00ಕ್ಕೆ ಸರಿಯಾಗಿ ಬ್ಯಾಂಕಿನ ವಠಾರದಲ್ಲಿ ಬಹಿರಂಗ ಹರಾಜು ಮಾಡಲಾದೀತು ಯಾ ಬ್ಯಾಂಕಿಗೆ ಯುಕ್ತ ಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಬಹಿರಂಗ ಯಾ ಖಾಸಗಿಯಾಗಿ ಹರಾಜು ಮಾಡಲಾದೀತು. ಈ ಸಂಬಂಧ ಬ್ಯಾಂಕಿಗೆ ಉಂಟಾಗಬಹುದಾದ ಸಕಲ ಖರ್ಚು ವ ನಷ್ಟವನ್ನು ತೆರಲು ಸದ್ರಿ ಸಾಲಗಾರರು ಜವಾಬುದಾರರಾಗಿರುತ್ತಾರೆ–ತಿಳಿದಿರಲಿ.

| ಕ್ರಮ ಸಂಖ್ಯೆ | ಸಾಲದ ನಂಬ್ರ | ಸಾಲಗಾರನ ಹೆಸರು ಮತ್ತು ವಿಳಾಸ | ಮೊಬಲಗು ರೂ. ಪೈಸೆ |
|---|---|---|---|
| 1. | 111/85 30.5.85 | ಶ್ರೀ ನಾಗಪ್ಪ ನ್ಯಾಕ ಬಿನ್ ಕಾಡಾನ್ಯಾಕ ಪೆಂಗನಾಳ, ಸೀತೂರು ಅಂಚೆ, | 260-00 |
| 2. | 144/85 22.7.85 | ಶ್ರೀ ಬಿ. ಕೃಷ್ಣಪ್ಪ, ಕೇರಾಫ್ ಪಾಂಡುರಂಗ ಭಜನಾ ಮಂಡಳಿ, ಚಿಲಿಂಬಿ–ಉರ್ವ, ಮಂಗಳೂರು–575 006. | 4810-00 |
| 3. | 29/86 20 2 86 | ಶ್ರೀ ಕೃಷ್ಣಮೂರ್ತಿ ಗೌಡ ಬಿ॥ ದುಗ್ಗಪ್ಪ ಗೌಡ, ಕಾಂಡ್ಯ, ಕುದ್ರೆಗುಂಡಿ ಅಂಚೆ | i1153-00 |
| 4. | 126/86 4.9.86 | ಶ್ರೀ ಧರ್ಮೇಗೌಡ ಬಿನ್ ಚಿನ್ನೇಗೌಡ ಕೋತಳ್ಳಿ, ಸೀತೂರು ಅಂಚೆ | 912-00 |
| 5. | 135/86 18.9 86 | ಶ್ರೀ ಎ.ಎಸ್. ಶೇಷಣ್ಣ ಬಿನ್ ಸಿದ್ದಪ್ಪಗೌಡ, ಅಳೆಹಳ್ಳಿ, ಕಾನೂರು ಅಂಚೆ | 4278-00 |
| 6. | 23/87 19 2.87 | ಶ್ರೀ ಪಿ.ಎಸ್. ಮಂಜುನಾಥ ಬಿನ್ ಸಣ್ಣನ್ಯಾಕ, ನಾಗರಮಕ್ಕಿ, ಸೀತೂರು ಅಂಚೆ | 1426-00 |
| 7. | 33/87 6 3 87 | ಶ್ರೀ ನಜೀರ್ ಅಹಮ್ಮದ್ ಬಿನ್ ಕಾಸೀಮ್‌ಸಾಹೇಬ್, ನರಸಿಂಹರಾಜಪುರ | 9502-00 |
| 8. | 86/87 7 5 87 | ಶ್ರೀ ಯು.ಎಸ್. ಭಾಸ್ಕರ್ ಬಿ॥ ನಾಗಪ್ಪಗೌಡ, ವಗ್ಗಡೆ, ಕಾನೂರು ಅಂಚೆ | 421-00 |
| 9. | 109/87 26 5.87 | ಶ್ರೀ ಮಂಜಪ್ಪಗೌಡ ಬಿ॥ ದೊಡ್ಡಸಿದ್ದಪ್ಪಗೌಡ, ಅಲೆಹಳ್ಳಿ, ಕಾನೂರು ಅಂಚೆ | 779-00 |
| 10. | 114/87 4 6 87 | ಶ್ರೀ ನಾಗಪ್ಪ ನ್ಯಾಕ ಬಿ॥ ಕಾಡನ್ಯಾಕ, ಪೆಂಗನಾಳ, ಸೀತೂರು ಅಂಚೆ | 599-00 |
| 11. | 121/87 11 6 87 | ಶ್ರೀ ಧರ್ಮೇಗೌಡ ಬಿ॥ ಚಿನ್ನೇಗೌಡ, ಕೋತಾಳ್ಳಿ, ಸೀತೂರು ಅಂಚೆ | 461-00 |
| 12. | 204/87 6.11 87 | ಶ್ರೀ ಎಚ್.ಎಂ. ರಾಮಪ್ಪ ಗೌಡ ಬಿ॥ ಮಂಜಪ್ಪಗೌಡ, ದಾವಣ, ಕಟ್ಟಿನಮನೆ ಅಂಚೆ | 485-00 |
| 13. | 209/87 12.11.87 | ಶ್ರೀ ಗಿಡ್ಡ ಬಿ॥ ಅಪ್ಪಿ, ಕೆರೆಗದ್ದೆ, ಸೀತೂರು ಅಂಚೆ | 286-00 |
| 14. | 222/87 2 12.87 | ಶ್ರೀ ಎಸ್. ಕೃಷ್ಣಕುಮಾರ್ ಬಿ॥ ಸಂಕಪ್ಪ ಮರ್ಚೆಂಟ್, ನರಸಿಂಹರಾಜಪುರ | 10910-00 |
| 15. | 1/88 4.1 88 | ಶ್ರೀ ಕೃಷ್ಣಪ್ಪಗೌಡ ಬಿನ್ ಗಿಡ್ಡೇಗೌಡ, ರಾಮನಹಡ್ಲು, ಕಾನೂರು ಅಂಚೆ | 602-00 |
| 16. | 14/88 28.1.88 | ಶ್ರೀ ಕೆ.ವಿ. ಶ್ರೀಧರ್ ಬಿನ್ ವೇಲಾಯುಧನ್, ಕೆರೆಮನೆ, ಕಾನೂರು ಅಂಚೆ | 3247-00 |

[ಮುಂದಿನ ಪುಟ ನೋಡಿ]

## ಔಷಧಿ ಸಸ್ಯಗಳ ರೇಡಿಯೋ ಕಾರ್ಯಕ್ರಮ 'ಸಸ್ಯ ಸಂಜೀವಿನಿ'

ಕೊಪ್ಪ : ಪ್ರತಿ ಭಾನುವಾರ ಬೆಳಗ್ಗೆ 8 20 ಕ್ಕೆ ರಾಜ್ಯದ ಎಲ್ಲ ಆಕಾಶವಾಣಿ ನಿಲಯಗಳು ಬಿತ್ತರಿಸುತ್ತಿರುವ 'ಸಸ್ಯ ಸಂಜೀವಿನಿ' ಕಾರ್ಯಕ್ರಮದಲ್ಲಿ ನಮ್ಮ ಸುತ್ತಮುತ್ತಲಿನ ಹಲವಾರು ಅತ್ಯಮೂಲ್ಯ ಔಷಧಿ ಸಸ್ಯಗಳ ಪರಿಚಯ ಮತ್ತು ಅವುಗಳ ಉಪಯೋಗ ಕುರಿತು ಉಪಯುಕ್ತ ಮಾಹಿತಿಗಳನ್ನು ಒದಗಿಸಲಾಗುತ್ತಿದೆ. ಈ ಕಾರ್ಯಕ್ರಮದ ಇನ್ನೂ 6 ಕಂತುಗಳು ಪ್ರಸಾರಗೊಳ್ಳಲಿವೆ. (ವರದಿ: ಹರ್ಡೀಕರ್).

## ಜಿ.ವಿ.ಜಿ.ಯವರ ವೈಜ್ಞಾನಿಕ ಪುಸ್ತಕಕ್ಕೆ ವಿಜ್ಞಾನ ಪರಿಷತ್ ಬಹುಮಾನ

● ಶಂ. ನ. ಶೇಷಗಿರಿ

'ಜಿ ವಿ.ಜಿ.' ಎಂದೇ ಖ್ಯಾತರಾದ ಪ್ರಸಿದ್ಧ ವ್ಯಂಗ್ಯಚಿತ್ರಕಾರರೂ ಸಾಹಿತಿಗಳೂ ಆದ ಅಗಳಗಂಡಿಯ ಜಿ. ವಿ. ಗಣೇಶಯ್ಯನವರು ಬರೆದ 'ಸ್ಕ್ರೀನ್ ಪ್ರಿಂಟಿಂಗ್ ಕಲಿಯಿರಿ' ಎಂಬ ವಿಜ್ಞಾನದ ಪುಸ್ತಕಕ್ಕೆ (ಹಸ್ತಪ್ರತಿ) 1989-90 ನೇ ಸಾಲಿನ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಬಹುಮಾನ ಲಭಿಸಿದೆ.

ಈ ವೈಜ್ಞಾನಿಕ ಲೇಖನ ವಿಜ್ಞಾನ ಪತ್ರಿಕೆಯಾದ 'ಸಂಶೋಧಕ' ಮಾಸಿಕದಲ್ಲಿ ಧಾರಾವಾಹಿಯಾಗಿ ಈ ಹಿಂದೆ ಪ್ರಕಟಗೊಂಡು ವಿಜ್ಞಾನಾಸಕ್ತರ ಮೆಚ್ಚುಗೆ ಗಳಿಸಿತ್ತು.

ಉತ್ತಮ ಕಲಾವಿದರೂ, ಛಾಯಾಗ್ರಾಹಕರೂ ಆಗಿರುವ ಜಿ.ವಿ.ಜಿ ಯವರು ಈಗ ಮೈಸೂರಿನ ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆಯಲ್ಲಿ ಕಲಾವಿದ-ಛಾಯಾಗ್ರಾಹಕರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ.

## ಎಂ. ಎಚ್. ಸುಧೀರ್ ಕುಮಾರ್ ರಾಜ್ಯ ಮಟ್ಟದ ವಿಜ್ಞಾನ ಮೇಳಕ್ಕೆ ಆಯ್ಕೆ

ಅಗಳಗಂಡಿ ಸರ್ಕಾರಿ ಪ್ರೌಢಶಾಲೆಯ 10ನೇ ತರಗತಿಯ ಪ್ರತಿಭಾವಂತ ವಿದ್ಯಾರ್ಥಿಯಾದ ಮಾ॥ ಎಂ. ಎಚ್. ಸುಧೀರ್ ಕುಮಾರ್ ಇವನು ಕೊಪ್ಪದಲ್ಲಿ ನಡೆದ ಜಿಲ್ಲಾ ಮಟ್ಟದ 'ವಿಜ್ಞಾನ ಮೇಳ'ದಲ್ಲಿ 'ನೀರೆತ್ತುವ ಯಂತ್ರ'ದ ಮಾದರಿ ಪ್ರದರ್ಶಿಸಿ ಮೆಚ್ಚುಗೆ ಗಳಿಸಿದ್ದಲ್ಲದೆ, ಉತ್ತಮ ಮಾದರಿಯೆಂದು ನಾಲ್ಕನೇ ಸ್ಥಾನ ಗಳಿಸಿದ್ದು, ರಾಜ್ಯ ಮಟ್ಟದ ವಿಜ್ಞಾನ ಮೇಳದಲ್ಲಿ ಭಾಗವಹಿಸಲು ಆಯ್ಕೆಯಾಗಿದ್ದಾನೆ

ಇದಲ್ಲದೆ, ಈ ಮೇಳದಲ್ಲಿ ನಡೆದ ಪ್ರಬಂಧ ಹಾಗೂ ಆಶುಭಾಷಣ ಸ್ಪರ್ಧೆಗಳಲ್ಲಿ ಈತ ದ್ವಿತೀಯ ಸ್ಥಾನ ಪಡೆದು ಶಾಲೆಗೆ ಕೀರ್ತಿ ತಂದಿದ್ದಾನೆ.

ಪಠ್ಯೇತರ ಚಟುವಟಿಕೆಯಲ್ಲಿ ಉತ್ತಮ ಪ್ರಗತಿ ತೋರಿಸುತ್ತಿರುವ ಈತ ಮೂಡಿಗೆರೆಯ ಕೃಷಿಕರಾದ ಹಾಲಪ್ಪ ಹೆಗ್ಡೆಯವರ ಮಗನಾಗಿದ್ದಾನೆ.

# ಸಡಗರದ ಜಿಲ್ಲಾ ಯುವ ಮೇಳ : ಕೊಪ್ಪ ತಾ॥ಗೆ ಸಮಗ್ರ ಪ್ರಶಸ್ತಿ
## ಕೊಪ್ಪದ ಕಣ್ಮಣಿ, ಅಂತರಾಷ್ಟ್ರೀಯ ಕ್ರೀಡಾಪಟು ಈಶನ್‌ಗೆ ಸನ್ಮಾನ

ಕೊಪ್ಪ : ಜಿಲ್ಲಾ ಯುವಜನ ಮೇಳ ಇಲ್ಲಿ ಡಿ. 14, 15 ಮತ್ತು 16ರಂದು ಅತ್ಯಂತ ಯಶಸ್ವಿಯಾಗಿ ನಡೆಯಿತು. ಅಚ್ಚುಕಟ್ಟಾದ ವ್ಯವಸ್ಥೆ, ಸಮಯವನ್ನು ಅದಷ್ಟು ಪಾಲಿಸಿದ ಕಾರ್ಯಕ್ರಮಗಳ ಜೊತೆಗೆ ಯಾವುದೇ ರೀತಿಯ ದೊಂಬಿ, ಗಲಾಟೆ, ಮುಂತಾದವುಗಳಿಗೆ ಅವಕಾಶವಿಲ್ಲದೆ ಶಾಂತ ರೀತಿಯಿಂದ ಕಾರ್ಯಕ್ರಮಗಳು ನಡೆದವು. ಈ ಹಿಂದೆ ತರೀಕೆರೆ, ಮೂಡಿಗೆರೆ ಮುಂತಾದೆಡೆಗಳಲ್ಲಿ ನಡೆದ ಮೇಳಗಳಲ್ಲಿನ ಗಲಭೆಗಳನ್ನು ನೆನೆಸಿಕೊಂಡರೆ ಈ ಅಂಶ ಅತ್ಯಂತ ಗಮನಾರ್ಹವೆನ್ನಿಸುತ್ತದೆ.

ಭಾವಗೀತೆ, ಲಾವಣಿ, ಕೋಲಾಟ, ನಾಟಕ, ವೀರಗಾಸೆ, ಡೊಳ್ಳು ಕುಣಿತ, ಸೋಬಾನೆ ಪದ ಮುಂತಾದ ಸ್ಪರ್ಧೆಗಳಲ್ಲಂತೂ ತುಂಬಾ ಉತ್ತಮ ಕಾರ್ಯಕ್ರಮಗಳು ಮೂಡಿ ಬಂದುವು. ಪಟ್ಟಣದ ಜನತೆಗೆ ಅಪರೂಪವಾದ ಮನರಂಜನೆಯನ್ನೂ ಒದಗಿಸಿದವು.

ಯುವಕರ ಮತ್ತು ಯುವತಿಯರ ಈ ಎರಡೂ ವಿಭಾಗಗಳ ಸಮಗ್ರ ಪ್ರಶಸ್ತಿಗಳು ಕೊಪ್ಪ ತಾಲ್ಲೂಕಿನ ಪಾಲಾದುದು ಅರ್ಹವಾಗಿತ್ತು. ಕೊಪ್ಪ ತಾಲ್ಲೂಕಿನ ವಿವಿಧ ಯುವತಿ ಮಂಡಳಿಗಳು ಲಾವಣಿ, ಸುಗ್ಗಿ ಹಾಡು, ಗೀಗೀ ಪದ; ಭಜನೆ, ಕೋಲಾಟ, ಬೀಸೋ ಕಲ್ಲಿನ ಪದ ಇವುಗಳಲ್ಲಿ ಪ್ರಥಮ ಸ್ಥಾನವನ್ನೂ ಇನ್ನಿತರ ಸ್ಪರ್ಧೆಗಳಲ್ಲೂ ಸಹ ಹಲವು ಪ್ರಶಸ್ತಿಗಳನ್ನೂ ಗಳಿಸಿ ಯುವತಿಯರ ವಿಭಾಗದ ಅಗ್ರ ಸ್ಥಾನ ಪಡೆದರೆ, ಯುವಕರು ಸುಗ್ಗಿ ಹಾಡು, ಭಜನೆ, ಜಾನಪದ ನೃತ್ಯ, ಯಕ್ಷಗಾನ ಮತ್ತು ನಾಟಕದಲ್ಲಿ ಮೊದಲ ಸ್ಥಾನ ಮತ್ತು ಇತರ ಪ್ರಶಸ್ತಿಗಳೊಂದಿಗೆ ಯುವಕರ ವಿಭಾಗದ ಅಗ್ರ ಸ್ಥಾನ ಪಡೆದರು.

ಕೊಪ್ಪ ಮಂಡಲ ಪ್ರಧಾನ ಪಿ. ಬಿ. ವಿವೇಕ್ ಅಧ್ಯಕ್ಷತೆಯಲ್ಲಿ ಶಾಸಕ ಶಾಮಣ್ಣ ಮೇಳವನ್ನು ಉದ್ಘಾಟಿಸಿದರು. ಕಳೆದ 4 ವರ್ಷಗಳಿಂದ ಇಲ್ಲಿ ಬಿಡಿಒ ಆಗಿದ್ದಾಗ ಯುವಜನ ಸಂಘಟನೆಗಳವರ ಮನ ಸೂರೆಗೊಂಡು, ಈ ವರ್ಷ ಶಿವಮೊಗ್ಗಕ್ಕೆ ವರ್ಗವಾಗುವಾಗ ಎಲ್ಲರ ಕಣ್ಣಲ್ಲೂ ನೀರಾಡಿಸಿ ಹೋಗಿದ್ದ ಸಾ. ರಾಮಮೂರ್ತಿಯವರು ಯುವಜನ ಒಕ್ಕೂಟದ ವಿಶೇಷ ಆಹ್ವಾನದ ಮೇರೆಲಿ ಅತಿಥಿಯಾಗಿ ಬಂದಿದ್ದರು. ತಹಸೀಲ್ದಾರ್, ಬಿಡಿಒ, ಪರಮೇಶ್ವರ, ಸುಮಿತ್ರಮ್ಮ ಅವರುಗಳೂ ಅತಿಥಿಗಳಾಗಿದ್ದರು.

ಯು. ಕೆ. ಶಾಮಣ್ಣನವರ ಅಧ್ಯಕ್ಷತೆಯಲ್ಲಿ ನಡೆದ ಸಮಾರಂಭದಲ್ಲಿ ಸಣ್ಣ ನೀರಾವರಿ ಮಂತ್ರಿ ಮಲ್ಲಿಕಾರ್ಜುನ ಪ್ರಸನ್ನ ಸಮಾರೋಪ ಭಾಷಣ ಮಾಡಿದರಲ್ಲದೆ, ಬೀಜಿಂಗ್ ಏಷ್ಯಾಡನಲ್ಲಿ ಶಾಟ್‌ಪುಟ್ ಪದಕ ವಿಜೇತರಾದ ಇದೇ ತಾಲ್ಲೂಕಿನ ಶಿವಪುರದ ಎಸ್. ಡಿ. ಈಶನ್‌ರಿಗೆ ಶಾಲು ಹೊದಿಸಿ ನಾಗರಿಕ ಸನ್ಮಾನ ನೀಡಿದರು. ಹಿಂದಿನ ಬಾರಿಯ ರಾಜ್ಯ ಯುವಜನ ಮೇಳದ ಪ್ರಶಸ್ತಿ ವಿಜೇತರಾದ ಗಣೇಶ ಹಂದೆ ಮತ್ತು ಕೆ. ಎಸ್. ಪ್ರಕಾಶ್ ಅವರನ್ನೂ ಶಾಲು ಹೊದಿಸಿ ಸನ್ಮಾನಿಸಲಾಯಿತು.

ಈಶನ್‌ರಿಗೆ ಕೊಪ್ಪದ ನಾಗರಿಕರ ಪರವಾಗಿ ಕೊಪ್ಪ ಮಂಡಲದ ವತಿಯಿಂದ 30' × 60' ಅಳತೆಯ ನಿವೇಶನದ ಹಕ್ಕುಪತ್ರವೊಂದನ್ನು ನೀಡಿದ ಪಿ. ಬಿ. ವಿವೇಕ್, ಈ ನಿವೇಶನದಲ್ಲಿ ಈಶನ್‌ಗೆ ಒಂದು ಸುಸಜ್ಜಿತವಾದ ಮನೆಯನ್ನು ಸರ್ಕಾರದ ವತಿಯಿಂದ ಕಟ್ಟಿಸಿಕೊಡುವಂತೆ ಸಚಿವರಲ್ಲಿ ಮನವಿ ಮಾಡಿದರು. ಶಾಸಕರೊಂದಿಗೆ ಸೇರಿ ಈ ಬಗ್ಗೆ ಪ್ರಯತ್ನಿಸುವುದಾಗಿ ಸಚಿವರು ಭರವಸೆಯಿತ್ತರು.

ಸಭಿಕರ ಕಣ್ಮಣಿಯಾಗಿದ್ದ ಈಶನ್ ಮಾತನಾಡಿ, "ದೇಶದ ಕೀರ್ತಿ ಪತಾಕೆಯನ್ನು ಅಂತರ ರಾಷ್ಟ್ರೀಯ ಕ್ರೀಡಾರಂಗದಲ್ಲಿ ಇನ್ನೂ ಎತ್ತರಕ್ಕೆ ಹಾರಿಸಬೇಕೆಂಬ ಆಕಾಂಕ್ಷೆಯಿದೆ. ಆದರೆ ಅದಕ್ಕೆ ಅಗತ್ಯವಾದ ಯೋಗ್ಯ ತರಬೇತಿ ಇನ್ನೂ ನನಗೆ ಸಿಕ್ಕಿಲ್ಲ. ಇನ್ನೂ ಸಾಧಿಸಬೇಕಾದ್ದು, ದೇಶಕ್ಕೆ ಸಲ್ಲಿಸಬೇಕಾದ್ದು ತುಂಬಾ ಇದೆ. ಸಾಧನೆಯ ಹಾದಿಯಲ್ಲಿ ತುಂಬಾ [illegible] ಬರುತ್ತಿದೆ; ಹಾಕಷ್ಟು ನೋವೂ [illegible] ಬೇಕಾಗಿ ಬಂದಿದೆ. ಆದರೆ ನನ್ನ ತಾಲ್ಲೂಕಿನ ಜನತೆ ಮತ್ತು ಮುಖಂಡರು [illegible] ಬೇಗನೇ ನನ್ನ ಪ್ರತಿಭೆ ಗುರುತಿಸಿ ಪ್ರೋತ್ಸಾಹ ನೀಡುತ್ತ ಬಂದಿದ್ದೀರಿ. ಇದನ್ನು ಸದಾ ನೆನಪಿನಲ್ಲಿಟ್ಟಿರುತ್ತೇನೆ. ನಿಮ್ಮೆಲ್ಲರ ಆಶೀರ್ವಾದ ಯಾವಾಗಲೂ ನನ್ನ ಮೇಲಿರಲಿ" ಎಂದರು. ಕ್ರೀಡೆಯ ತರಬೇತಿ [illegible] ಜೊತೆ ಜೊತೆಗೇ ಬೆಳೆದು ಬರಬೇಕೆಂದು ಅವರು ಅಭಿಪ್ರಾಯ ಪಟ್ಟರು.

ಭಾಷಣದ ಅಧ್ಯಕ್ಷರು [illegible] ಸಹಸ್ರ ಕಟ್ಟುಗಳಿಗಾಗಿ ಒಮ್ಮೊಮ್ಮೆ [illegible] ವಹಿಸಿದಾಗಲೂ, ಉನ್ನತ ಸಾಧನೆಯ [illegible]

(6ನೇ ಪುಟಕ್ಕೆ)

### ಜಯಪುರ : ಯುವಸ್ತ್ರೀ ಜೇಸಿ ಸಪ್ತಾಹ

ಜಯಪುರ : ಇಲ್ಲಿನ [illegible] ಥೀಂಟ್‌ನ ಸಪ್ತಾಹವನ್ನು ಡಿ. 9 ರಂದು ಅಧ್ಯಕ್ಷರಾದ ಜೇಸಿ ಎ. [illegible] ಅಧ್ಯಕ್ಷತೆಯಲ್ಲಿ [illegible] ಮಾಜಿ ಶಾಸಕರಾದ ಶ್ರೀನಿವಾಸ್ [illegible] ರ್ ಉದ್ಘಾಟಿಸಿದರು. [illegible] ಮುಖ್ಯ ಅತಿಥಿಗಳಾಗಿ [illegible] ಪ್ರತಿದಿನವೂ [illegible] ಮಕ್ಕಳಿಗಾಗಿ ಮತ್ತು ಮಹಿಳೆಯರು [illegible] ಅನೇಕ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಡಿ. 15 ರಂದು ನಡೆದ ಸಮಾರೋಪ ಸಮಾರಂಭದಲ್ಲಿ [illegible] ಶ್ರೀನಿವಾಸ್ ಮುಖ್ಯ ಅತಿಥಿಯಾಗಿದ್ದರು. ಕೊಪ್ಪ [illegible] ಕೆ. ಎಸ್. [illegible] ರ್ ಸಮಾರೋಪ ಭಾಷಣ ಮಾಡಿದರು. [illegible] ವಂದನಾರ್ಪಣೆ ಮಾಡಿದರು.

[illegible] ಎಸ್. ಎಸ್. [illegible] ನಿರ್ವಹಿಸಿದರು.

[ಹಿಂದಿನ ಪುಟದಿಂದ ಮುಂದುವರಿದುದು]

| ಕ್ರಮ ಸಂಖ್ಯೆ | ಸಾಲದ ನಂಬ್ರ | ಸಾಲಗಾರನ ಹೆಸರು ಮತ್ತು ವಿಳಾಸ | ಮೊಬಲಗು ರೂ ಪೈಸೆ |
|---|---|---|---|
| 17. | 39/88<br>8 3.88 | ಶ್ರೀ ಎಂ. ಆರ್. ನಾಗರಾಜ ಬಿನ್ ರಂಗಪ್ಪ<br>ಅರಳೀಕೊಪ್ಪ, ಮೂಡಬಾಗಿಲು ಅಂಚೆ | 2202-00 |
| 18. | 45/88<br>19 3 88 | ಶ್ರೀ ಎಚ್ ಆರ್. ಮಂಜಪ್ಪ ಬಿನ್ ರಾಮೇಗೌಡ,<br>ಹೊಸಗದ್ದೆ, ದಾವಣ, ಕಟ್ಟಿನಮನೆ ಅಂಚೆ | 581-00 |
| 19. | 63/88<br>28 4 88 | ಶ್ರೀ ಜಯರಾಮ ಬಿನ್ ಕುಂಜರ ಪೂಜಾರಿ,<br>ದೋಣಿಸರ, ಬೆಳ್ಳೂರು ಅಂಚೆ | 290-00 |
| 20. | 64/88<br>28 4.88 | ಶ್ರೀ ಸುಬ್ಬಾ ನ್ಯಾಕ ಬಿನ್ ಬಾಬುನ್ಯಾಕ<br>ಕುಣಜ. ಬೆಳ್ಳೂರು ಅಂಚೆ | 1444-00 |
| 21. | 81/88<br>12.5 88 | ಶ್ರೀ ಶಂಕರಶೆಟ್ಟಿ ಬಿನ್ ನಾರಾಯಣ ಶೆಟ್ಟಿ<br>ಜೋಗಿಮಕ್ಕಿ, ನರಸಿಂಹರಾಜಪುರ | 1307-00 |
| 22. | 123/88<br>4 7.88 | ಶ್ರೀ ಕೆ ಎಸ್. ಮೊಹಮ್ಮದ್ ಬಿನ್ ಸೈದಾಲಾಬಿ<br>ಕಾನೂರು ಗ್ರಾಮ ಮತ್ತು ಅಂಚೆ | 8775-00 |
| 23. | 141/88<br>28 7.88 | ಶ್ರೀ ಎಸ್ ಎಂ, ಉಗ್ರಪ್ಪ ಬಿನ್ ಮಂಜಪ್ಪ<br>ಬಂಗವಾನೆ, ವಗ್ಗಡೆ ಗ್ರಾಮ, ಕಾನೂರು ಅಂಚೆ | 3255-00 |
| 24. | 144/88<br>28 7 88 | ಶ್ರೀ ಕೆ.ಎಸ್. ಮೊಹಮ್ಮದ್ ಬಿನ್ ಸೈದಾಲಾಬಿ<br>ಕಾನೂರು ಗ್ರಾಮ ಮತ್ತು ಅಂಚೆ | 645-00 |
| 25. | 147/88<br>28 7.88 | ಶ್ರೀ ಧರ್ಮಯ್ಯ ಗೌಡ ಬಿನ್ ಚಿನ್ನಯ್ಯಗೌಡ<br>ಕೋತಳ್ಳಿ, ಸೀತೂರು ಅಂಚೆ | 662-00 |
| 26. | 153/88<br>4.8 88 | ಶ್ರೀ ಶ್ರೀನಿವಾಸ ಮೂರ್ತಿ ಬಿನ್ ತಿಮ್ಮಯ್ಯಗೌಡ<br>ಮಲಾಳೆ ಅಂಚೆ, ನರಸಿಂಹರಾಜಪುರ ತಾಲ್ಲೂಕು | 2100-00 |
| 27 | 163/88<br>23,8.88 | ಶ್ರೀ ಎಮ್. ಆರ್. ಪುಟ್ಟಸ್ವಾಮಿ ಬಿನ್ ರಾಮನ್ಯಾಕ<br>ಮಾಲೂರುದಿನ್ನೆ, ಬಿ ಎಚ್. ಕೈಮರ ಅಂಚೆ | 7280-00 |
| 28. | 175/88<br>1 9.88 | ಶ್ರೀ ಎಚ್. ಪಿ ರಾಮಯ್ಯ ಬಿನ್ ಗೋವಿಂದೇಗೌಡ<br>ಎಡದಾಳು, ಬಿ.ಎಚ್. ಕೈಮರ ಅಂಚೆ | 822-00 |
| 29. | 181/88<br>22 9 88 | ಶ್ರೀ ಶೇಖರ ಪೂಜಾರಿ ಬಿನ್, ವೆಂಕ್ರ ಪೂಜಾರಿ,<br>ಹಳ್ಳಿಬೈಲು, ಬೆಳ್ಳೂರು ಅಂಚೆ. | 597-00 |
| 30. | 190/88<br>29 9 88 | ಶ್ರೀ ವಿ. ಜೆ. ಪರಮೇಶ್ವರ ಬಿನ್ ಜಟ್ಟಿನ್ಯಾಕ<br>ವಗ್ಗಡೆ, ಗೋರ್‌ಗಾಲ್, ಕಾನೂರು ಅಂಚೆ. | 1758-00 |
| 31. | 195/88<br>3 10 88 | ಶ್ರೀ ಜೆ ಶಂಕ್ರಯ್ಯ ಬಿನ್ ಲಿಂಗಪ್ಪಯ್ಯ,<br>ಮಡೋಡಿ, ನಾಗರಮಕ್ಕಿ, ಸೀತೂರು ಅಂಚೆ. | 1085-00 |
| 32. | 208/88<br>13.10.88 | ಶ್ರೀ ನಾಗಪ್ಪ ಗೌಡ, ಬಿನ್ ಚಿನ್ನಯ್ಯ ಗೌಡ,<br>ಹೆಮ್ಮೂರು, ಕೆಸನೋಡಿ ಗ್ರಾಮ, ಬೆಳ್ಳೂರು ಅಂಚೆ | 415-00 |

ಉಪ ಶಾಖಾಧಿಕಾರಿ

# 'ಬೌದ್ಧಿಕ ಸವಾರಿ'ಯೋ, ಚಾರಿತ್ರ್ಯ ಹರಣವೋ ?

(3ನೇ ಪುಟದಿಂದ)
ಅವರು, ಫೀ ಕೊಡುವ ವಿದ್ಯಾರ್ಥಿಗಳಿಗೆ ಯಾವ ರೀತಿಯ ಪ್ರಯೋಜನ? ಎಂದು ವಿರೋಧಾಭಾಸದ ಮಾತುಗಳನ್ನೂ ಬರೆದಿದ್ದಾರೆ. ನಮ್ಮ ಗ್ರಂಥಾಲಯದಲ್ಲಿ,

1) ಸೈನ್ಸ್ ರಿಪೋರ್ಟರ್, ಸೈನ್ಸ್ ಟುಡೇ, ಸೈನ್ಸ್ ಇನ್ ಯು.ಎಸ್.ಎಸ್.ಆರ್., ಮ್ಯಾತಮ್ಯಾಟಿಕ್ಸ್ ಟುಡೇ, ಸ್ಪುಟ್ನಿಕ್-ಮುಂತಾದ ವಿಜ್ಞಾನಕ್ಕೆ ಸಂಬಂಧಿಸಿದ ದೇಶೀಯ ಮತ್ತು ವಿದೇಶೀಯ ನಿಯತಕಾಲಿಕಗಳಿವೆ.

2) ನ್ಯಾಶನಲ್ ಜಿಯಾಗ್ರಫಿ, ಟೈಂಸ್, ನ್ಯೂಸ ವೀಕ್, ಜೆಂಟಲ್‌ಮನ್, ಇಂಡಿಯ ಟುಡೇ, ಇಲ್ಲಸ್ಟ್ರೇಟೆಡ್ ವೀಕ್ಲೀ, ಅನ್‌ಲುಕರ್, ಅಲೈವ್, ಸೋವಿಯತ್ ಲಿಟರೇಚರ್, ಸೋವಿಯತ್ ಯೂನಿಯನ್, ಭವಾನ್ಸ್ ಜರ್ನಲ್ ಮುಂತಾದ ದೇಶ-ವಿದೇಶದ ಸಾಮಾನ್ಯ ಮತ್ತು ಸಂಶೋಧನಾತ್ಮಕ ಪತ್ರಿಕೆಗಳಿವೆ.

3) ಎಂಪ್ಲಾಯ್‌ಮೆಂಟ್ ನ್ಯೂಸ್, ಕಾಂಪಿಟೇಶನ್ ಟೈಂಸ್, ಕಾಂಪಿಟೇಶನ್ ಸಕ್ಸಸ್ ರಿವ್ಯೂ, ವಿಸ್ಡಂ, ರೀಡರ್ಸ್ ಡೈಜೆಸ್ಟ್ ಮುಂತಾದ ಪರೀಕ್ಷೆಗೆ, ಭವಿಷ್ಯಕ್ಕೆ ಸಹಕಾರಿಯಾದ ಪತ್ರಿಕೆಗಳಿವೆ.

4) ವಿಜ್ಞಾನ ಕರ್ನಾಟಕ, ಜನಪ್ರಿಯ ವಿಜ್ಞಾನ, ಪ್ರಬುದ್ಧ ಕರ್ನಾಟಕ (ಮೈ ವಿ.ವಿ.), ಸಾಧನ (ಬೆಂ. ವಿ. ವಿ) ರುಜುವಾತು, ಶೂದ್ರ, ವಿಜ್ಞಾನ ಪರಿಚಯ, ಜಾನಪದ ಜಗತ್ತು, ಮುಂತಾದ ವಿಜ್ಞಾನ-ಸಾಹಿತ್ಯಗಳಿಗೆ ಸಂಬಂಧಿಸಿದ, ಪ್ರೌಢ ಎಂದು ಅಧ್ಯಾಪಕರುಗಳು ಸಲಹೆ ನೀಡಿದ ನಿಯತಕಾಲಿಕಗಳು ಬರುತ್ತಿವೆ. ಈ ಪತ್ರಿಕೆಗಳನ್ನು ಫೀ ಕೊಡುವ ವಿದ್ಯಾರ್ಥಿಗಳಿಗಾಗಿಯೇ ತರಿಸುತ್ತಿದ್ದೇವೆ

ಸುಧಾ, ವಾರ ಪತ್ರಿಕೆ, ತರಂಗ, ರಾಜು ಪತ್ರಿಕೆ, ಮಯೂರ, ಕಸ್ತೂರಿ, ತುಷಾರ, ಇತ್ಯಾದಿ ಸಾಮಾನ್ಯ ಓದಿಗಾಗಿ ಮಾತ್ರ ತರಿಸಲಾಗುತ್ತಿದೆ. ಕನ್ನಡ ಮತ್ತು ಇಂಗ್ಲಿಷ್‌ನ ಎಲ್ಲಾ ದಿನಪತ್ರಿಕೆಗಳೂ ಬರುತ್ತಿವೆ. ಈ ಮೇಲಿನ ಯಾವ ಪತ್ರಿಕೆಗಳು ವಿದ್ಯಾರ್ಥಿಗಳ ಮನಸ್ಸನ್ನು ಕುಲಗೆಡಿಸಲು ಇವೆ ಎಂದು ಅರ್ಥವಾಗುತ್ತಿಲ್ಲ.

ಲಂಕೇಶ್ ಪತ್ರಿಕೆ ಮತ್ತು ಸುದ್ದಿ ಸಂಗಾತಿ-ಇವುಗಳ ಪ್ರಗತಿಶೀಲ ನಿಲುವುಗಳನ್ನು ನಾನು ಪ್ರಶ್ನಿಸುವುದಿಲ್ಲ. ಆದರೆ ಅವು ಕನ್ನಡ ಸಾಹಿತ್ಯ-ಸಿದ್ಧಾಂತಗಳ ಗಂಭೀರ ಅಧ್ಯಯನದ ಪತ್ರಿಕೆಗಳೆಂದು ನನಗೆ ತಿಳಿದದ್ದು 'ಶೃಂಗ' ರಿಂದ ಮಾತ್ರ ! 'ಕೋಮು ದ್ವೇಷಕ್ಕೆ ಇಂಬುಗೊಡುವ ಪತ್ರಿಕೆ' ಯಾವುದೆಂದು ನನಗೆ ತಿಳಿಯದು. ಅಂತಹ ಪತ್ರಿಕೆಗಳು ಇದ್ದರೆ, ಈ ದೇಶದ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳಲು ಸರಕಾರ ಇಲ್ಲವೇ?

ಇಂಗ್ಲೀಷ್ ಸಾಹಿತ್ಯದಲ್ಲಿ ಚಾಸರ್‌ನಿಂದ ಹಿಡಿದು ಇಲಿಯಟ್ ಮತ್ತು ಎಜ್ರಾ ಫೌಂಡ್‌ರ ಕೃತಿಗಳವರೆಗೆ ಕ್ಲಾಸಿಕ್ ಎನಿಸಿಕೊಳ್ಳುವ ಎಲ್ಲಾ ಕೃತಿಗಳು ಈಗಲೂ ಇವೆ. ನೊಬೆಲ್ ಪ್ರಶಸ್ತಿಯ ಹೆಚ್ಚಿನೆಲ್ಲ ಇಂಗ್ಲಿಷ್ ಕೃತಿಗಳೂ ನಮ್ಮಲ್ಲಿವೆ ಕನ್ನಡದಲ್ಲಿ ಪಂಪನಿಂದ ಇಂದಿನವರೆಗಿನ ಕಾವ್ಯ ಪರಂಪರೆಯ ಎಲ್ಲಾ ಕ್ಲಾಸಿಕ್ ಕೃತಿಗಳೂ ನಮ್ಮಲ್ಲಿವೆ ಈ ಎಲ್ಲಾ ಪುಸ್ತಕಗಳನ್ನೂ ಆಯಾ ವಿಭಾಗದ ಮುಖ್ಯಸ್ಥರ, ಅಧ್ಯಾಪಕರ ಮತ್ತು ಆಡಳಿತ ಮಂಡಳಿಯ ಸಲಹೆಯ ಮೇರೆಗೇ ತರಿಸಲಾಗುತ್ತದೆ.

ಅಧ್ಯಾಪಕರ ಮನೆಯಲ್ಲಿ ಪುಸ್ತಕಗಳು ಧೂಳು ತಿನ್ನುತ್ತಿರುವ ವಿಚಾರಕ್ಕೆ ನನ್ನ ಪ್ರತಿಕ್ರಿಯೆ ಇಲ್ಲ ಆದರೂ, ಅವರಿಗಾಗಿ ನಿಗದಿಪಡಿಸಿದಷ್ಟು ಪುಸ್ತಕಗಳನ್ನು ಮಾತ್ರ ಗ್ರಂಥಾಲಯದಿಂದ ಕೊಡಲಾಗುತ್ತದೆ.

ಗ್ರಂಥಪಾಲಕ ಪುಸ್ತಕಗಳನ್ನು 'ಇಲ್ಲ'ವಾಗಿಸಿದರೆ ಆತ ಸಂಬಳದಿಂದ ಪುಸ್ತಕಗಳ ಬೆಲೆಯ ಎರಡರಷ್ಟನ್ನು ತೆರಬೇಕಾಗುತ್ತದೆ ಎಂಬುದು 'ಶೃಂಗ'ರಿಗೆ ತಿಳಿದಿರಲಿಕ್ಕಿಲ್ಲ.

ಮೂರನೇ ದರ್ಜೆ ಇಂಗ್ಲಿಷ್ ಕಾದಂಬರಿಗಳು ಯಾವುವೋ ನನಗೆ ತಿಳಿಯದು. ಇಂಗ್ಲಿಷ್ ವಿಭಾಗದ ಮುಖ್ಯಸ್ಥರು ತಾವು ಓದಿದ್ದರಲ್ಲಿ ಅಂತಹದ್ದೇನೂ ಕಂಡಿಲ್ಲವೆಂದಿದ್ದಾರೆ. 'ಶೃಂಗ' ರ ವಿಮರ್ಶೆಯ ಮಾನದಂಡ ಯಾವುದೋ ನನಗೆ ಅರ್ಥವಾಗಿಲ್ಲ.

'ಹೊಟ್ಟೆಪಾಡಿಗಾಗಿ ದುಡಿಯುವ' ವಿಚಾರದಲ್ಲಿ ನನ್ನ ಪ್ರತಿಕ್ರಿಯೆ ಇಲ್ಲ, ಏಕೆಂದರೆ ದುಡಿದು ಉಣ್ಣದೆ ಇರುವ 'ಮಹಾತ್ಮ' ನಾನಲ್ಲ. ಈ ವಿಚಾರವಾಗಿ ಇನ್ನು ಮುಂದೆ ಯಾವುದೇ ಪ್ರತಿಕ್ರಿಯೆ ಕೊಡಲು ನಾನು ಇಷ್ಟಪಡುವುದಿಲ್ಲ.

(ಸಹಿ) ಗ್ರಂಥಪಾಲಕರು,
ಜೆ.ಸಿ.ಬಿ ಎಂ. ಕಾಲೇಜು, ಶೃಂಗೇರಿ.

## ಅರ್ಜಿ ಆಹ್ವಾನ

ಸ್ಟಾಫ್ ಸೆಲೆಕ್ಷನ್ ಇವರು ಡಿವಿಜನಲ್ ಅಕೌಂಟೆಂಟ್ಸ್, ಆಡಿಟರ್ಸ್ ಮತ್ತು ಅಪ್ಪರ್ ಡಿವಿಜನ್ ಕ್ಲರಿಕಲ್ ಹುದ್ದೆಗಳ, 1991ನೇ ಫೆಬ್ರವರಿ ಮಾಹೆಯಲ್ಲಿ ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಲಿದ್ದಾರೆ ಸದರಿ ಪರೀಕ್ಷೆಯನ್ನು ತೆಗೆದುಕೊಂಡ ಚಿಕ್ಕಮಗಳೂರು ಜಿಲ್ಲೆಯ ಅಭ್ಯರ್ಥಿಗಳು ಬೋಧನಾ ಕೇಂದ್ರದಲ್ಲಿ ಪರೀಕ್ಷಾಪೂರ್ವ ತರಬೇತಿ ಪಡೆಯಲು ಆಸಕ್ತಿ ಹೊಂದಿದ್ದಲ್ಲಿ, ಅರ್ಜಿ ನಮೂನೆಯೊಂದಿಗೆ ಹಾಗೂ ತಮ್ಮ ಎಲ್ಲಾ ದಾಖಲಾತಿಗಳೊಂದಿಗೆ **ದಿನಾಂಕ. 7-1-91ರೊಳಗಾಗಿ** ಪ್ರಿನ್ಸಿಪಾಲ್, ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಇಲಾಖೆ, ಬೋಧನಾ ಕೇಂದ್ರ, ಕುವೆಂಪು ನಗರ ಮೈಸೂರು ಇವರಿಗೆ ತಲುಪುವಂತೆ ಕಳುಹಿಸಬಹುದು.

## ಪುರಂದರ, ತ್ಯಾಗರಾಜರ ಆರಾಧನಾ ಮಹೋತ್ಸವ

ಹರಿಹರಪುರ : ಇಲ್ಲಿಗೆ ಸಮೀಪದ ಸೂರಳಿಯಲ್ಲಿ ಪುರಂದರ ದಾಸರ ಮತ್ತು ತ್ಯಾಗರಾಜರ ಆರಾಧನಾ ಮಹೋತ್ಸವ ಜ. 5 ಮತ್ತು 6 ರಂದು ನಡೆಯಲಿದೆ.

ಸತತ 9 ನೇ ವರ್ಷ ನಡೆಯುತ್ತಿರುವ ಈ ಉತ್ಸವ ಪ್ರಶಾಂತವಾದ ಹಳ್ಳಿಯ ರಮ್ಯ ಪರಿಸರದಲ್ಲಿ. ಊರು-ಪರವೂರುಗಳ ಸಂಗೀತ ಕಲಾವಿದರು ಮತ್ತು ವಿದ್ವಾಂಸರಿಂದ ಸಮೃದ್ಧ ಸಂಗೀತ ಕಛೇರಿಗಳ ರಸದೌತಣವನ್ನು ಸವಿಯುವ ಅಪೂರ್ವ ಅವಕಾಶವನ್ನೂ ಒದಗಿಸಲಿದೆ.

## ಕೊಪ್ಪ ತಾ|| ಬಿಜೆಪಿ ನೂತನ ಆಧ್ಯಕ್ಷರಾಗಿ ಜೋಯಿಸ್

ಕೊಪ್ಪ : ಉತ್ತಮೇಶ್ವರದ ಕೆ. ಚಂದ್ರಶೇಖರ ಜೋಯಿಸ್ ಕೊಪ್ಪ ತಾ|| ಬಿ ಜೆ. ಪಿ. ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ತಾಲ್ಲೂಕಿನ ವಿವಿಧ ಕಡೆಗಳ 15 ಜನರು ಕಾರ್ಯಕಾರಿ ಸಮಿತಿಗೆ ಸದಸ್ಯರಾಗಿದ್ದಾರೆ.

ಡಿ. 17 ರಂದು ನಡೆದ ಚುನಾವಣೆಯಲ್ಲಿ ಬಿಜೆಪಿ ಜಿಲ್ಲಾ ಕಾರ್ಯದರ್ಶಿ ಬಿ. ಎಸ್. ವಿಠಲರಾವ್ ಚುನಾವಣಾಧಿಕಾರಿಯಾಗಿದ್ದರು. ಇದಕ್ಕೆ ಮೊದಲು ಬಿ ಎಂ. ರಘುನಾಥ್ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಬಿ. ಕೆ. ಗಣೇಶರಾವ್ ಸ್ವಾಗತಿಸಿದರು.

## ನಮ್ಮದೂ ಬೆಂಬಲವಿದೆ

(3ನೇ ಪುಟದಿಂದ)
ನೆಪ ಹೇಳಿಕೊಂಡು ಬರುವುದಿದೆ ಇಂತಹವರಿಗೆ ಕೊಡುವ ಬದಲು ನಿಮ್ಮ ನಮ್ಮ ಹಳ್ಳಿಗಳಲ್ಲಿರುವ ತೀರ ಬಡ ಕುಟುಂಬಗಳಿಗೆ ಅಥವಾ ಅಂಗವಿಕಲರಿಗೆ ಕೊಡಬಹುದು.

ಏನಾದರಾಗಲಿ, ಈ ಸಂಭಾವನೆಯೆಂಬ ಪಿಡುಗನ್ನು ಶಾಶ್ವತವಾಗಿ ನಿಲ್ಲಿಸಲು ಸಹಕರಿಸಬೇಕೆಂಬ ಕಲ್ಲುಗುಡ್ಡೆ ಗ್ರಾಮಸ್ಥರ ಕೋರಿಕೆಗೆ ನಮ್ಮ ಗ್ರಾಮದವರ ಬೆಂಬಲ, ಸಹಕಾರ ಸಮ್ಮತಿ ಇದೆ. ಈ ವಿಚಾರವನ್ನು ಗ್ರಾಮದವರ ಪರವಾಗಿ ಹೇಳುತ್ತಿದ್ದೇನೆ.

—ಕೆ ಎನ್. ರಾಜೇಂದ್ರ, ಬಿಂತ್ರವಳ್ಳಿ

## ಯಶಸ್ವಿ ಜಿಲ್ಲಾ ಯುವಜನ ಮೇಳ

(5ನೇ ಪುಟದಿಂದ)
ಕೇಂಕಾರವಿಲ್ಲದೆ, ಸ್ವಚ್ಛ ಮನಸ್ಸಿನಿಂದ ಮುಗ್ಧವಾಗಿ ಮಾತನಾಡುತ್ತಿದ್ದಾಗ ನಿಶ್ಶಬ್ದವಾಗಿ ಆಲಿಸಿದ ಜನ, ಅವರ ಪುಟ್ಟ ಭಾಷಣ ಮುಗಿದಾಗ ಸಂತೋಷ ತುಂಬಿ ಸುದೀರ್ಘ ಕರತಾಡನ ಮಾಡಿದರು ಅವರನ್ನು ಸನ್ಮಾನಿಸಿದಾಗಲೂ ಹಾಗೇ. ಈಶನ್‌ರ ತಂದೆ ಶಿವಪುರ ದುಗ್ಗಪ್ಪ ಗೌಡರನ್ನು ಸಹ ವ್ಯವಸ್ಥಾಪಕರು ವೇದಿಕೆಗೆ ಕರೆದು ಕುಳ್ಳಿರಿಸಿ ಗೌರವ ಸೂಚಿಸಿದರು.

ಸಮಾರಂಭದಲ್ಲಿ ತಾ| ಯು| ಒಕ್ಕೂಟ ಅಧ್ಯಕ್ಷ ಜಿ ಡಿ. ಪರಮೇಶ್ವರ ಸ್ವಾಗತಿಸಿದರು. ಜಿ ಪ. ಅಧ್ಯಕ್ಷ ರಾಮದಾಸ್ ಬಹುಮಾನ ವಿತರಿಸಿದರು. ಬಾಳೆಹೊನ್ನೂರಿನ ಜಿ ಪ. ಸದಸ್ಯೆ ಬಿ. ಸಿ. ಗೀತಾ, ಕೊಪ್ಪ ತಾಲ್ಲೂಕಿನ ಮೂವರೂ ಜಿ. ಪ ಸದಸ್ಯರು ಮತ್ತು ವಿಜಯ ಅಜಿಲ ಮುಖ್ಯ ಅತಿಥಿಗಳಾಗಿದ್ದರು. ಕರುಣಾಕರ ಶೆಟ್ಟಿ ವಂದಿಸಿದರು.

ಮೇಳದ ಉದ್ಘಾಟನೆ ಮತ್ತು ಸಮಾರೋಪಕ್ಕೆ ಮೊದಲು ವಿವಿಧ ಜಾನಪದ ವೇಷಭೂಷಣಗಳೊಂದಿಗೆ ಸ್ಪರ್ಧಿಗಳು ಪಟ್ಟಣದಲ್ಲಿ ಮೆರವಣಿಗೆ ನಡೆಸಿದರು ಸಮಾರೋಪದ ಮೆರವಣಿಗೆಯಲ್ಲಿ ಇತರ ಗಣ್ಯರೊಡನೆ ಈಶನ್ ಕೂಡ ಭಾಗವಹಿಸಿದ್ದುದು, ಮೊದಲೇ ಆಕರ್ಷಕವಾಗಿದ್ದ ಮೆರವಣಿಗೆಗೆ ಮತ್ತಷ್ಟು ಕಳೆ ಕಟ್ಟಿತ್ತು ಎಂದರೆ ಅತಿಶಯೋಕ್ತಿಯಲ್ಲ.

ಯುವಜನ ಸೇವಾ ಇಲಾಖೆಯ ಯಜಮಾನಿಕೆಯಲ್ಲಿ ನಡೆದ ಈ ಮೇಳ ಕೊಪ್ಪದ ಮೂರೂ ಮಂಡಲ ಪಂಚಾಯ್ತಿಗಳ ನೆರವಿನೊಂದಿಗೆ ಬಾಳಗಡಿಯ ಸರ್ವೋದಯ ಯುವಕ ಸಂಘ ಮತ್ತು ಚೇತನ ಯುವತಿ ಮಂಡಳಿಯ ಸಂಯುಕ್ತ ಆಶ್ರಯದಲ್ಲಿ ನಡೆಯಿತು.

## ಈ ಹಳ್ಳಿಗಳ ಮಾರ್ಗದಲ್ಲಿ ಪುನಃ ಬಸ್ ಓಡಾಡಲಿ

ಪ್ರಿಯರೆ,

ತಾವರೆಕೆರೆಯಿಂದ ಶಿಗ್ಗಕ್ಕೆ (ಶಿವಮೊಗ್ಗ-ನ ರಾ. ಪುರ-ಕೊಪ್ಪ-ಉತ್ತಮೇಶ್ವರ ಅಗಳಗಂಡಿ-ಶೃಂಗೇರಿ ಮಾರ್ಗ) ಓಡಾಡುತ್ತಿದ್ದ ಉದಯ ಬಸ್ಸಿನ ಪರವಾನಗಿಯನ್ನು ಪರವಾನಗಿದಾರರು 'ಸರೆಂಡರ್' ಮಾಡಿರುವುದರಿಂದ ಈ ಮಾರ್ಗದಲ್ಲಿ, ಅದರಲ್ಲೂ ಉತ್ತಮೇಶ್ವರ, ಬೆಳವಿನಕೊಡಿಗೆ, ದಯಂಬಳ್ಳಿ ಇತ್ಯಾದಿ ಹಳ್ಳಿ ಮಾರ್ಗದಲ್ಲಿದ್ದ 4 ಬಸ್ಸಿನಲ್ಲಿ ಒಂದು ಬಸ್ಸು ನಿಂತು ಶಾಲಾ ಮಕ್ಕಳಿಗೆ ಹಳ್ಳಿ ಜನಗಳಿಗೆ ಬಹಳ ತೊಂದರೆಯಾಗಿದೆ.

ಆದ್ದರಿಂದ ದಯಮಾಡಿ ನಮ್ಮ ಜಿಲ್ಲಾಧಿಕಾರಿಗಳು ಈ ಬಗ್ಗೆ ಯಾರಾದರೂ ಆಸಕ್ತಿ ಇದ್ದವರು ಅರ್ಜಿ ಹಾಕಿದ್ದರೆ ಅವರಿಗಾಗಲಿ ಅಥವಾ ರಾಜ್ಯ ಸಾರಿಗೆ ಸಂಸ್ಥೆಗಾಗಲಿ ತುರ್ತಾಗಿ ಪರವಾನಗಿ ಕೊಡಬೇಕಾಗಿ ಪ್ರಾರ್ಥಿಸುತ್ತೇವೆ.

ಇಂತಿ ಗ್ರಾಮಸ್ಥರು,
(7 ಜನರ ಸಹಿಗಳಿವೆ)



ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್, ಅಚ್ಚು : ದೀಪಟಿಗೆ ಅಚ್ಚು ಕೂಟ, ಕೊಪ್ಪ